# ಸಿಹಿ ಕಹಿ

ಸಂಪಾದಕರು : ಮಾರುತಿ ಬಸವಂತಪ್ಪ ಹೊಸಮನಿ
Editor : MARUTI BASAVANTAPPA HOSAMANI
Cell : +91 9741319119

ಕನ್ನಡ ದಿನಪತ್ರಿಕೆ, ಬಾಗಲಕೋಟೆ
ಬಾಗಲಕೋಟೆಯಿಂದ ಪ್ರಕಟಿತ
RNI REG No. : KARKAN/2016/75068

SIHI KAHI
KANNADA DAILY MORNING
BAGALKOT

Volume : 07 | Issue : 132 | Monday 27-01-2025 | E-mail : maruti.b.hosamani76@gmail.com | Page: 4 | Price : Rs. 1/-




## “ಭಾರತ ಮಾತೆಗೆ ಜಯವಾಗಲಿ ಗಣ ರಾಜ್ಯೋತ್ಸವದ ಶುಭ ದಿನ”




ಭಾರತ ದೇಶದ ಪ್ರಜಾರಾಜರಿಗೆ ಭಾರತ ಸಂವಿಧಾನ ಜಾರಿಗೆ
26ಜನೇವರಿ 1950 ಸಂಪೂರ್ಣ ಸ್ವರಾಜ್ಯ ನಮ್ಮ ಹೆಮ್ಮೆ
ಪರಕೀಯರ ಸಂಕೋಲೆ ಕಳೆದ ಹೊಸತು ಸರ್ವ ಜನ ಸವಲತ್ತು
ಏಕತೆಗೆ ತ್ಯಾಗದಿ ಶ್ರಮಿಸಿದ ಮಹನೀಯರ ಚಿರ ನೆನಪು
ಸರ್ವಜನರು ಸ್ಮರಿಸಿ
ಭಾರತ ವರ ಪುತ್ರರಿಗೆ ಪುಷ್ಪಗಳ ಸುರಿಮಳೆ
ರಾಷ್ಟಪಿತ ಮಹಾತ್ಮಾ ಗಾಂಧಿಜೀ
ಸಂವಿಧಾನ ಶಿಲ್ಪಿ ಭಾರತ ರತ್ನ ಡಾ. ಬಿ ಆರ್ ಅಂಬೇಡ್ಕರ್
ಪ್ರಥಮ ಪ್ರಧಾನಿ ಪ. ಜವಹರಲಾಲ್ ನೆಹರು
ನೇತಾಜಿ ಸುಭಾಸ್ ಚಂದ್ರ ಬೋಸ, ವಲ್ಲಭ ಭಾಯಿ ಪಟೇಲ್
ಲಾಲ್ ಬಹಾದ್ದೂರ್ ಶಾಸ್ತ್ರೀ,
ಸಹಸ್ರ ಲಕ್ಷ ಭಾರತತಾಂಬೆಯ ವರ ಪುತ್ರರ ಸುಕೃತಫಲ
ನಮಗೆಲ್ಲಾ ನಾವೇ ಧನ್ಯರು ಭಾರತ ದೇಶ ಪೂಣ್ಯ
ಭೂಮಿಯಲಿರುವುದು ನಮ್ಮೆಲ್ಲರ ಹೆಮ್ಮೆ
ಪ್ರಜಾರಾಜ್ಯೋತ್ಸವ ದಿನ ಸರ್ವರಿಗೂ ಹರುಷ
ಭಾರತ ದೇಶದ ಸದಾ ಪ್ರಜಾರಾಜರಿಗೆ ಶುಭ ಹರುಷ
ದೇಶ ಕಟ್ಟಲು ಶ್ರಮಿಸಿದ ಮಹಿನೀಯರೆಲ್ಲರಿಗೂ ಗೌರವದ ಸಲಾಂ
ಜಯ ಘೋಷ ಭಾರತಾಂಬೆಗೆ
ಗೌರವದಿ
"ಜೈಜವಾನ್ ಜೈಕಿಸಾನ್" ಜೈಹಿಂದ್ ವಂದೇ ಮಾತರಂ
"ಭಾರತ ಮಾತೆಗೆ ಜಯವಾಗಲಿ" ಗಣಜಾರಾಜ್ಯೋತ್ಸವ ಶುಭ ದಿನ
ಹೆಮ್ಮೆಯಿಂದ ಘರ್ಜಿಸಿ ಭಾರತ ದೇಶ ಸದಾ ವಿಶ್ವದೆಲ್ಲಡೆ ಪ್ರಜ್ವಲಿಸಲಿ.

**–ಶ್ರೀದೇಶಂಸು**
**ಶ್ರೀ ಸುರೇಶ ಶಂಕ್ರೆಪ್ಪ ಅಂಗಡಿ**
**ಆರೋಗ್ಯ ನಿರೀಕ್ಷಣಾಧಿಕಾರಿ**
**ಬಾಗಲಕೋಟ**

# ನಾಗರಿಕ ಸಮಾಜ ತನ್ನ ಮತವನ್ನು ಮತ್ತು ಜವಾಬ್ದಾರಿಯನ್ನು ಮರೆತು ಬಿಟ್ಟಿದೆ – ನ್ಯಾ. ಮೂಲಿಮನಿ

**ಸಿಹಿ ಕಹಿ ಸುದ್ದಿ,**
**ಹುನಗುಂದ :** ದೇಶದ ಕಾನೂನುಗಳ ಬಗ್ಗೆ ಜನರಲ್ಲಿ ಸಾಮಾನ್ಯ ತಿಳುವಳಿಕೆ ಇದ್ದರೇ, ಇಂತಹ ಕಾರ್ಯಕ್ರಮವನ್ನು ಮಾಡಿ ಜನಜಾಗೃತಿ ಮಾಡುವ ಅವಶ್ಯಕತೆ ಬರುತ್ತಿರಲಿಲ್ಲ, ನಾವು ನಮ್ಮ ಮತವನ್ನು ಮತ್ತು ಜವಾಬ್ದಾರಿಯನ್ನು ಮರೆತು ಬಿಟ್ಟಿದ್ದೇವೆ ಎಂದು ಹೆಚ್ಚುವರಿ ಜಿಲ್ಲಾ ಸತ್ರ ಮತ್ತು ಸಂಚಾರಿ ಪೀಠದ ನ್ಯಾಯಾಧೀಶ ಜೆ.ಎ ಮೂಲಿಮನಿ ಬೇಸರವನ್ನು ವ್ಯಕ್ತಪಡಿಸಿದ್ದರು.

ಶನಿವಾರ ಪಟ್ಟಣದ ತಹಶೀಲ್ದಾರ ಕಚೇರಿಯ ಸಭಾ ಭವನದಲ್ಲಿ ತಾಲೂಕ ಆಡಳಿತ, ತಾಲೂಕ ಕಾನೂನು ಸೇವಾ ಸಮಿತಿ, ವಕೀಲರ ಸಂಘದ ಸಹಯೋಗದಲ್ಲಿ ಹಮ್ಮಿ ಕೊಳ್ಳಲಾಗಿದ್ದ ರಾಷ್ಟ್ರೀಯ ಮತದಾರರ ದಿನಾಚರಣೆಯನ್ನು ಉದ್ಘಾಟಿಸಿ ಮಾತನಾಡಿದ ಅವರು, ಯಾವ ದೇಶದಲ್ಲಿ ಪ್ರಜ್ಞಾವಂತ ಜನರು ಇರುತ್ತಾರೋ ಅಂತ ದೇಶದ ಕಾನೂನುಗಳ ತಿಳುವಳಿಕೆ ಇರುತ್ತೆ. ಮಾರುಕಟ್ಟೆಯಲ್ಲಿ ವಿವಿಧ ವಸ್ತುಗಳನ್ನು ಖರೀದಿಸುವಾಗ ಚೌಕಾಸಿ ಮಾಡುವಂತಹ ಜನರು ಶಾಸಕ ಮತ್ತು ಚುನಾಯಿತ ಪ್ರತಿನಿಧಿಗಳನ್ನು ಆಯ್ಕೆ ಮಾಡುವಲ್ಲಿ ಯಾಕೆ ಆ ಮಹತ್ವದ ನಿರ್ಧಾರವನ್ನು ತೆಗೆದು ಕೊಳ್ಳುತ್ತಿಲ್ಲ ಎನ್ನುವುದು ಒಂದು ಸಮಸ್ಯೆಯಾಗಿದೆ. ಎಲ್ಲಿವರೆಗೆ ನಮ್ಮ ದೇಶದ ಕಾನೂನಿನ



ಜ್ಞಾನ, ನಮ್ಮ ಹಕ್ಕು ಕರ್ತವ್ಯಗಳ ಬಗ್ಗೆ ತಿಳುವಳಿಕೆ ಮೂಡುವುದಿಲ್ಲವೋ ಅಲ್ಲಿವರೆಗೆ ದೇಶದ ಸಮಗ್ರ ಅಭಿವೃದ್ಧಿಗೆ ಕುಂಠಿತವಾಗಲಿದೆ ಎಂದರು.

ಉಪನ್ಯಾಸಕಿ ಛಾಯಾ ಪುರಂದರೆ ಉಪನ್ಯಾಸವನ್ನು ನೀಡಿ ಮಾತನಾಡಿ ಭಾರತ ದೇಶ ಬೃಹತ್ ಪ್ರಜಾಸತ್ತಾತ್ಮಕ ರಾಷ್ಟ್ರವಾಗಿದ್ದು, ಚುನಾವಣೆಯೇ ಇದಕ್ಕೆ ಆಧಾರ ಸ್ತಂಭವಾಗಿದ್ದು, ಮತದಾನವೇ ಅತ್ಯಂತ ಪ್ರಮುಖವಾಗಿದೆ. 18 ವರ್ಷ ಪೂರೈಸಿದ ಯುವಕ ಯುವತಿಯರು ಮೊದಲು ಮತದಾನ ಪಟ್ಟಿಯಲ್ಲಿ ತಮ್ಮ ಹೆಸರನ್ನು ನೋಂದಾಯಿಸಿ ಕೊಳ್ಳಬೇಕು, ಅದರ ಜೊತೆಗೆ ಮತಗಟ್ಟೆಗೆ ಬಂದು ಮತದಾನದ ಹಕ್ಕನ್ನು ಚಲಾಯಿಸಬೇಕು. ಮತದಾನದ ಪ್ರಮಾಣ ಹೆಚ್ಚಿದಂತೆ ಉತ್ತಮ ನಾಯಕನನ್ನು ಆಯ್ಕೆ ಮಾಡಲು ಸಾಧ್ಯ. ದೇಶದ ಅಭಿವೃದ್ಧಿಯಾಗಲೂ ಮತದಾನ ಬಹಳಷ್ಟು ಪೂರಕವಾಗಿದೆ ಎಂದರು.

ಗ್ರೇಡ್. 2 ತಹಶೀಲ್ದಾರ ಮಹೇಶ್ ಸಂದಿಗವಾಡ ಮಾತನಾಡಿ ಪ್ರತಿ ವರ್ಷ ರಾಜ್ಯ ಚುನಾವಣೆ ಆಯೋಗ ನಾಲ್ಕು ಬಾರಿ ಮತದಾರರ ಪಟ್ಟಿ ಪರಷ್ಕರಣೆ ಮಾಡಲಾಗುತ್ತದೆ. ಈ ಬಾರಿ ರಾಜ್ಯದಲ್ಲೇ ಬಾಗಲಕೋಟೆ ಜಿಲ್ಲೆ ಅಚ್ಚುಕಟ್ಟಾದ ಮತದಾರರ ಪಟ್ಟಿ ಪರಿಷ್ಕರಣೆ ಮಾಡಿದ್ದರಿಂದ ಬಾಗಲಕೋಟೆ ಜಿಲ್ಲಾಧಿಕಾರಿ ಕೆ.ಎಂ ಜಾನಕಿ ಅವರನ್ನು ಚುನಾವಣೆ ಆಯೋಗ ಅತ್ಯುತ್ತಮ ಮತದಾರ ಪರಷ್ಕರಣೆ ಪ್ರಶಸ್ತಿ ನೀಡಿ ಗೌರವಿಸಿದ್ದಾರೆ ಎಂದರು.

ವೇದಿಕೆಯಲ್ಲಿ ಹಿರಿಯ ದಿವಾಣಿ ನ್ಯಾಯಾಧೀಶ ಹನುಮಂತರಾವ್ ಕುಲಕರ್ಣಿ, ಅಪರ ದಿವಾಣಿ ನ್ಯಾಯಾಧೀಶ ಬಸವರಾಜ ನೇಸರ್ಗಿ, ವಕೀಲರ ಸಂಘದ ಅಧ್ಯಕ್ಷ ಪ್ರಕಾಶ್ ಕಠಾಣಿ, ಸರ್ಕಾರಿ ಅಭಿಯೋಜಕ ಸುನಿಲಕುಮಾರ ಹುಣಸಿ, ಸರ್ಕಾರಿ ಪ್ರಥಮ ದರ್ಜೆ ಕಾಲೇಜ್ ಪ್ರಾಚಾರ್ಯ ಸಿಕಂದರ್ ಬದಾಮಿ, ಸರ್ಕಾರಿ ಪದವಿ ಪೂರ್ವ ಕಾಲೇಜಿನ ಪ್ರಾಚಾರ್ಯ ಶರಣಪ್ಪ ಹೂಲಗೇರಿ, ಸಿಡಿಪಿಓ ವೆಂಕಟೇಶ ಗಿರಿತಮ್ಮನವರ, ಸೇರಿದಂತೆ ಅನೇಕರು ಇದ್ದರು. ಎನ್.ವಾಯ್ ನದಾಫ್ ಸ್ವಾಗತಿಸಿ ನಿರೂಪಿಸಿದರು, ಎ.ಎಚ್ ನಾಯಕ ವಂದಿಸಿದರು.

**ತಾಲೂಕ ವರದಿಗಾರರು, ಸಿಹಿ ಕಹಿ ಕನ್ನಡ ದಿನ ಪತ್ರಿಕೆ ಹಾಗೂ ಎಸ್.ಕೆ ನ್ಯೂಸ್ ಕನ್ನಡ ಚಾನಲ್: ಮಲ್ಲಿಕಾರ್ಜುನ.ಬಿ. ಬಂಡರಗಲ್ಲ**

### ಮತದಾರರು ರಾಷ್ಟ್ರಪತಿ ಮತ್ತು ಪ್ರಧಾನಿಗಿಂತಲೂ ಶ್ರೇಷ್ಠ,

**ದೇಶದ ಸಮಗ್ರ ಅಭಿವೃದ್ಧಿ ಮತ್ತು ವ್ಯಕ್ತಿ ತನ್ನ ಹಕ್ಕು ಸೌಲಭ್ಯವನ್ನು ಪಡೆದು ಕೊಳ್ಳಬೇಕಾದರೆ ಮೊದಲು ತನ್ನ ನೈತಿಕ ಹೊಣೆಗಾರಿಕೆ ಮತ್ತು ಜವಾಬ್ದಾರಿಯನ್ನು ಪೂರೈಸ ಬೇಕಾಗುತ್ತದೆ. ಒಂದು ದೇಶದ ಪ್ರಗತಿ ಆ ದೇಶದ ಮತದಾನದ ಮೇಲೆ ನಿಂತಿದೆ. ಮತದಾರರು ರಾಷ್ಟ್ರಪತಿ ಮತ್ತು ಪ್ರಧಾನ ಮಂತ್ರಿಗಿಂತಲೂ ಸರ್ವ ಶ್ರೇಷ್ಠರು. ನೀವು ಒಳ್ಳೆಯ ಚುನಾಯಿತ ಪ್ರತಿನಿಧಿಯನ್ನು ಆಯ್ಕೆ ಮಾಡಿದಾಗ ಮಾತ್ರ ನಿಮ್ಮ ಹಕ್ಕು ಸೌಲಭ್ಯ ಸಿಗಲು ಸಾಧ್ಯ ಮತ್ತು ದೇಶದ ಅಭಿವೃದ್ಧಿಗೆ ಪೂರಕವಾಗಲಿದೆ. ಜೆ.ಎ ಮೂಲಿಮನಿ. ನ್ಯಾಯಾಧೀಶರು. ಹೆಚ್ಚುವರಿ ಜಿಲ್ಲಾ ಸತ್ರ ಮತ್ತು ಸಂಚಾರಿ ಪೀಠ ಹುನಗುಂದ.**

# ಕೆಎಚ್‌ಡಿಸಿ ಶಾಲೆಯಲ್ಲಿ ಆಹಾರ ಮೇಳ

**ಬನಹಟ್ಟಿ :** ಇಲ್ಲಿಯ ಕೆ. ಎಚ್. ಡಿ. ಸಿ. ಕಾಲೋನಿಯ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಮಕ್ಕಳ ಆಹಾರ ಮೇಳ ಕಾರ್ಯಕ್ರಮ ನಡೆಯಿತು.

ಸಜ್ಜೆ ರೊಟ್ಟಿ, ಜೋಳದ ರೊಟ್ಟಿ, ಖಡಕ್ ರೊಟ್ಟಿ, ಜುಣಕಾ, ಬದನೆಕಾಯಿ ಪಲ್ಯ, ಪುಂಡಿ ಪಲ್ಯ, ಚಪಾತಿ, ಶೇಂಗಾ ಹೋಳಿಗೆ, ಶೇಂಗಾ ಉಸುಳಿ, ಅಗಸಿ ಹಿಂಡಿ, ಗುರೆಳ್ಳು ಹಿಂಡಿ,
ಹುಳಿಬಾನ, ಕೆಂಪು ಖಾರ, ದೋಸೆ, ಪಡ್ಡು, ಬಜ್ಜಿ, ಸಮೋಸ, ಪಕೋಡ, ಪಲಾವ್, ಕೇಸರಿ ಬಾತ್, ಜಾಮೂನು, ಗಜ್ಜರಿ ಹಲ್ವಾ ಹೀಗೆ ತರಹೇವಾರಿ ಭಕ್ಷ್ಯ ಭೋಜನಗಳು ಮಕ್ಕಳನ್ನು ಹಾಗೂ ದೊಡ್ಡವರನ್ನು ಆಕರ್ಷಿಸುವಲ್ಲಿ ಸಫಲವಾದವು.

ಮಕ್ಕಳು ತಮ್ಮ ಮನೆಯಿಂದ ತಯಾರಿಸಿಕೊಂಡು ಬಂದಿದ್ದ ಆಹಾರವನ್ನು ಆಹಾರ ಮೇಳದಲ್ಲಿ



ಪ್ರದರ್ಶಿಸಿ ಮಾರಾಟ ಮಾಡಿ ಖುಷಿ ಪಟ್ಟರು.

ಭಡಂಗ, ರಸ್ನಾ, ಹಣ್ಣಿನ ಜ್ಯೂಸ್, ಮಜ್ಜಿಗೆ, ಲಿಂಬೂ ಶರಬತ್ ಮುಂತಾದ ಪಾನೀಯಗಳು ಕೂಡ ಮಾರಾಟಕ್ಕೆ ಲಭ್ಯವಿದ್ದು ಆಹಾರ ಮೇಳಕ್ಕೆ ಬಂದವರ ದಾಹ ತೀರಿಸಿದವು.

ಕಾರ್ಯಕ್ರಮ ಉದ್ಘಾಟಿಸಿದ ಶಾಲೆಯ ಮುಖ್ಯಗುರು ಚಿಕ್ಕಯ್ಯ ಬುದ್ನಿ ಮಾತನಾಡಿ, ಇಂದಿನ ಶಿಕ್ಷಣದಲ್ಲಿ ಕೌಶಲ್ಯಗಳ ಪಾತ್ರ ಮಹತ್ವದ್ದಾಗಿದ್ದು ಆಹಾರ ಮೇಳ, ಸಂತೆ ಮೇಳ ಮೊದಲಾದವುಗಳು ಮಕ್ಕಳಲ್ಲಿ ಪರಿಪೂರ್ಣ ಶಿಕ್ಷಣ ಪಡೆಯಲು ಪೂರಕವಾಗಿವೆ ಎಂದರು.

ಪ್ರಾಸ್ತಾವಿಕವಾಗಿ ಮಾತನಾಡಿದ ಶಿಕ್ಷಕಿ ಶೈಲಾ ಬುರ್ಲಿ, ಆಹಾರ ಮೇಳದಲ್ಲಿ ಮಕ್ಕಳಿಗೆ ಇಂದಿನ ಹಾಗೂ ಹಿಂದಿನ ಆಹಾರ ಪದ್ಧತಿಯನ್ನು ಪರಿಚಯಿಸಿ ವ್ಯವಹಾರ ಜ್ಞಾನ ಹಾಗೂ ಕೌಟುಂಬಿಕ ಸಹಭಾಗಿತ್ವ ಗುಣಗಳನ್ನು ಬೆಳೆಸಲು ಪ್ರಯತ್ನಿಸಲಾಗುತ್ತಿದೆ ಎಂದರು.

ಸಮೂಹ ಸಂಪನ್ಮೂಲ ವ್ಯಕ್ತಿ ಜಗದೀಶ ಕುಳ್ಳೊಳ್ಳಿ, ಚಟುವಟಿಕೆಗಳು ವಿದ್ಯಾರ್ಥಿಗಳ ಸರ್ವಾಂಗೀಣ ಅಭಿವೃದ್ಧಿಗೆ ಪೂರಕವಾಗಿದ್ದು ಶಿಕ್ಷಕರು ಹೆಚ್ಚೆಚ್ಚು ಚಟುವಟಿಕೆಗಳನ್ನು ಬಳಸಿ ಬೋಧಿಸಬೇಕು ಎಂದರು.

ಶಿಕ್ಷಕರಾದ ಬಿ. ವಿ. ತೆಗ್ಗಿ, ಸಿ. ಬಿ. ಜೈನಾಪುರ, ಎಸ್. ಎಂ. ಕಿತ್ತೂರ, ಎಸ್. ಆರ್. ಹಿಪಲಿ, ಅತಿಥಿ ಶಿಕ್ಷಕರಾದ ಮುಜರಿನ್ ಮುಲ್ಲಾ, ಜ್ಯೋತಿ, ಸಂತೋಷ ಮಠಪತಿ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.

ವಿದ್ಯಾರ್ಥಿಗಳ ಪಾಲಕರು ಆಗಮಿಸಿ ತಿಂಡಿ
ತಿನಿಸುಗಳನ್ನು ಖರೀದಿಸುವ ಮೂಲಕ ಸೇವಿಸಿ ಆಸ್ವಾದಿಸಿದರು.

# ರಾಯಣ್ಣ ಮೂರ್ತಿ ಪ್ರತಿಷ್ಠಾಪನೆ

**ಬನಹಟ್ಟಿ :** ಇಲ್ಲಿಯ ಸೋಮವಾರ ಪೇಟೆ ವೃತ್ತದಲ್ಲಿ ಜನೇವರಿ 20 ರಂದು ಬೆಳಿಗ್ಗೆ ಸಂಗೊಳ್ಳಿ ರಾಯಣ್ಣನ ಮೂರ್ತಿಯ ಪ್ರತಿಷ್ಠಾಪನೆ ಹಾಗು ವಿವಿಧ ಧಾರ್ಮಿಕ ಕಾರ್ಯಕ್ರಮಗಳು ಜರುಗಿದವು.



ನ್ಯಾಯವಾದಿ ಅರ್ಜುನ ಜಿಡ್ಡಿಮನಿ ಮಾತನಾಡಿ, ರಾಯಣ್ಣನ ವ್ಯಕ್ತಿತ್ವದ ಬಗ್ಗೆ ಹೆಚ್ಚಿನ ಅಧ್ಯಯನ ನಡೆಸಿ ಅವರಂತೆ ನಾವು ಉತ್ತಮ ವ್ಯಕ್ತಿತ್ವವನ್ನು ಮೈಗೂಡಿಸಿಕೊಂಡಾಗ ಮಾತ್ರ ರಾಯಣ್ಣನವರಿಗೆ ನಿಜವಾದ ಗೌರವ ಸಲ್ಲಿಸಿದಂತಾಗುತ್ತದೆ. ದೇಶ ಪ್ರೇಮಿಯಾಗಿ ದೇಶಕ್ಕೆ ತಮ್ಮನ್ನು ತಾವು ಸಮರ್ಪಿಸಿಕೊಂಡಿದ್ದ ರಾಯಣ್ಣರು ನಿಯತ್ತು ಮತ್ತು ಕ್ರಾಂತಿಕಾರಕ ಧೋರಣೆಗೆ ಹೆಸರಾಗಿದ್ದವರು. ಅವರ ವ್ಯಕ್ತಿತ್ವವು ಪ್ರತಿಯೊಬ್ಬರಿಗೂ ಮಾದರಿಯೆಂದರು.

ಕರೆಪ್ಪ ಭುಜಂಗ ಮಾತನಾಡಿ, ಬ್ರಿಟಿಷರ ಪಾಲಿಗೆ ಸಿಂಹ ಸ್ವಪ್ನರಾಗಿದ್ದ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣನ ಆದರ್ಶಗಳು ಇಂದಿಗೂ ಎಲ್ಲರಿಗೂ ದಾರಿ ದೀಪವಾಗಿವೆ ಎಂದರು.

ಭೀರಪ್ಪ ಜಿಡ್ಡಿಮನಿ, ಶೇಖರ ಮಹಿಷವಾಡಗಿ, ಕರೆಪ್ಪ ಗಡದಿ, ದೇವಪ್ಪ ಮಹಿಷವಾಡಗಿ, ರಮೇಶ ಜಿಡ್ಡಿಮನಿ, ಪರಸಪ್ಪ ಜಂಗನ್ನವರ, ಮಾಳಪ್ಪ ಕರಿಗಾರ, ಮಾಳಪ್ಪ ಆಲಕನೂರ, ಕಾಡಪ್ಪ ಆಲಕನೂರ ಸೇರಿದಂತೆ ಅನೇಕರು ಹಾಜರಿದ್ದರು.

# ಯಾವುದೇ ಜಾತಿ ಭೇದ ಭಾವ ಮಾಡದೆ ಅಂಬೇಡ್ಕರರ ಸಂವಿಧಾನಕ್ಕೆ ಪ್ರತಿಯೊಬ್ಬರು ಗೌರವ ಕೊಡಬೇಕು: ಪ್ರಾಚಾರ್ಯ ಸಿ.ಬಿ ಪೊಲೀಸ್ ಪಾಟೀಲ್

**ಸಿಹಿ ಕಹಿ ಸುದ್ದಿ,**
**ರೋಣ :** ಪ್ರತಿಷ್ಠಿತ ಕನಕದಾಸ ಶಿಕ್ಷಣ ಸಮಿತಿಯ ಅಂಗ ಸಂಸ್ಥೆಗಳಾದ ರೋಣ ನಗರದ ಶ್ರೀ ಶರಣ ಬಸವೇಶ್ವರ ಪ್ರೌಢ ಶಾಲೆ ಪದವಿ ಪೂರ್ವ ಹಾಗೂ ಕೆ.ಎಸ್. ಎಸ್ ಮಹಾವಿದ್ಯಾಲಯ ಎಲ್ಲ ಸಂಸ್ಥೆಗಳ ಅಡಿಯಲ್ಲಿ 76 ನೇ. ಗಣ ರಾಜ್ಯೋತ್ಸವದ ಕಾರ್ಯಕ್ರಮವು ಅದ್ದೂರಿಯಾಗಿ ಜರುಗಿತು.

ಪ್ರಾರಂಭದಲ್ಲಿ ಮಹಾತ್ಮ ಗಾಂಧೀಜಿ ಹಾಗೂ ಡಾ, ಬಿ.ಆರ್ ಅಂಬೇಡ್ಕರ್ ಭಾವ ಚಿತ್ರಕ್ಕೆ ಸಂಪ್ರದಾಯ ಬದ್ಧವಾಗಿ ಪೂಜಾ ಕಾರ್ಯಕ್ರಮವನ್ನು ನೆರವೇರಿಸಲಾಯಿತು. ನಂತರ ಸಂಸ್ಥೆಯ ಸ್ಥಾನಿಕ ಮುಖ್ಯಸ್ಥರಾದ ಐ.ಬಿ ದಂಡಿನ ಧ್ವಜಾರೋಹಣ ಕಾರ್ಯಕ್ರಮವನ್ನು ನೆರವೇರಿಸಿದರು.

ನಂತರ ರಾಷ್ಟ್ರಗೀತೆ ಯೊಂದಿಗೆ ಧ್ವಜಾರೋಹಣ ಕಾರ್ಯಕ್ರಮಕ್ಕೆ ಗೌರವ ಸಲ್ಲಿಸಲಾಯಿತು.

ಶ್ರೀ ಶರಣಬಸವೇಶ್ವರ ಪ್ರೌಢ ಶಾಲೆಯ ವಿದ್ಯಾರ್ಥಿಗಳಿಂದ ಪಥ ಸಂಚಲನ ಕಾರ್ಯಕ್ರಮ ನೆರವೇರಿತು.

ಈ ಸಮಯದಲ್ಲಿ ಕೆ.ಎಸ್.ಎಸ್ ಪದವಿ ಮಹಾವಿದ್ಯಾಲಯದ ಪ್ರಾಚಾರ್ಯರಾದ ಸಿ.ಬಿ ಪೊಲೀಸ್ ಪಾಟೀಲ್ ಇವರು ಕಾರ್ಯಕ್ರಮ ಉದ್ದೇಶಿಸಿ ನಾವಿಂದು 76 ನೇ. ಗಣ ರಾಜ್ಯೋತ್ಸವವನ್ನು ಆಚರಿಸುತ್ತಿದ್ದೇವೆ. ಭಾರತ ಪ್ರಜಾಪ್ರಭುತ್ವ



ರಾಷ್ಟ್ರವಾದ ದಿನ ಹಾಗೂ ಭಾರತದ ಸಂವಿಧಾನ ಅಸ್ತಿತ್ವಕ್ಕೆ ಬಂದ ದಿನವನ್ನು ಗಣ ರಾಜ್ಯೋತ್ಸವ ಎಂದು ಆಚರಿಸಲಾಗುತ್ತದೆ. ಪ್ರತಿ ವರ್ಷ ಜನವರಿ 26 ರಂದು ಗಣ ರಾಜ್ಯೋತ್ಸವ ವಿರುತ್ತದೆ. 1950 ರಲ್ಲಿ ಭಾರತದ ಸಂವಿಧಾನವನ್ನು ಅಂಗೀಕರಿಸಿದ ದಿನದ ನೆನಪಿನಲ್ಲಿ ಈ ಗಣ ರಾಜ್ಯೋತ್ಸವ ಆಚರಿಸಲಾಗುತ್ತದೆ. ಈ ದಿನ ದಂದು ಭಾರತವು ತನ್ನನ್ನು ತಾನು ಸಾರ್ವಭೌಮ, ಪ್ರಜಾಪ್ರಭುತ್ವ ಮತ್ತು ಗಣ ರಾಜ್ಯ ರಾಜ್ಯವೆಂದು ಘೋಷಿಸಿ ಕೊಂಡಿತು.

ವಿಶೇಷವಾಗಿ ಗಣ ರಾಜ್ಯಕ್ಕಾಗಿ ಮುಖ್ಯ ಪಾತ್ರ ವಹಿಸಿರುವ ಅಂಬೇಡ್ಕರರ ಸಂವಿಧಾನ
ಎಲ್ಲದಕ್ಕೂ ಮೂಲ ಅಸ್ತಿ ಬಾರ ಯಾವುದೇ ಜಾತಿ ಭೇದ ಭಾವ ಮಾಡದೆ ಸಂವಿಧಾನಕ್ಕೆ ಗೌರವವನ್ನು ಸಲ್ಲಿಸಬೇಕು ಎಂದು ಮಾತನಾಡಿದರು.

ನಂತರ ಈ ಸಮಯದಲ್ಲಿ ಬಿ.ಇ.ಡಿ ಪ್ರಶಿಕ್ಷಣಾರ್ಥಿಯಾದ ಮುದಿಯಪ್ಪ ಹುಡೇದ್ ರವರುಜನವರಿ 26, 1950 ರಂದು ಭಾರತೀಯ ಸಂವಿಧಾನವು ಜಾರಿಗೆ ಬಂದಿತು. ಭಾರತದ ಸಂವಿಧಾನವನ್ನು ರಚಿಸುವ ಉದ್ದೇಶದಿಂದ ಸಂವಿಧಾನ ಸಭೆಯು ತನ್ನ ಮೊದಲ ಅಧಿವೇಶನವನ್ನು ಡಿಸೆಂಬರ್ 9, 1946 ರಂದು ನಡೆಸಿತು. ಕೊನೆಯ ಅಸೆಂಬ್ಲಿ ಅಧಿವೇಶನವು ನವೆಂಬರ್ 26, 1949 ರಂದು ಕೊನೆ ಗೊಂಡಿತು ಮತ್ತು ನಂತರ ಒಂದು ವರ್ಷದ ನಂತರ ಸಂವಿಧಾನವನ್ನು ಅಂಗೀಕರಿಸಲಾಯಿತು ಎಂದು ಮಾತನಾಡಿದರು.

ಈ ಸಮಯದಲ್ಲಿ ಎಸ್.ಎಸ್.ಬಿ ಪದವಿ ಪೂರ್ವ ಮಹಾವಿದ್ಯಾಲಯದ ಪ್ರಾಚಾರ್ಯರಾದ ಶ್ರೀಮತಿ ಎ.ಎಚ್ ನಾಯ್ಕರ್ ಎಸ್.ಬಿ ಸಿರಗುಂಪಿ, ಎಸ್.ವಿ ಶಂಕನಗೌಡ್ರ, ಡಾ, ಎಸ್.ಆರ್ ನದಾಫ್, ಎಮ್.ಎಚ್ ನಾಯ್ಕರ್, ಕೆ.ಕೆ ಕಲ್ಲಪ್ಪನವರ್, ಶಿವು ಮಠದ, ಬಸವರಾಜ್ ಜಂಗಣ್ಣವರ್,
ಕುಮಾರಿ ಲಲಿತಾ ನಂದೆಪ್ಪಗೌಡ್ರ, ಯು.ಬಿ ಬಸನಗೌಡ ಪದವಿ ಮಹಾವಿದ್ಯಾಲಯದ ಹಾಗೂ ಪ್ರೌಢ ಶಾಲೆ ಸಿಬ್ಬಂದಿ ವರ್ಗ ಪ್ರಶಾಂತ ಹಾಗೂ ಓಲೆಕಾರ್ ಸರ್ ಎಲ್ಲಾ ವಿದ್ಯಾರ್ಥಿ ವಿದ್ಯಾರ್ಥಿನಿಯರು ಉಪಸ್ಥಿತರಿದ್ದರು.

**ಜಿಲ್ಲಾ ವರದಿಗಾರರು, ಸಿಹಿ ಕಹಿ ಕನ್ನಡ ದಿನ ಪತ್ರಿಕೆ ಹಾಗೂ ಎಸ್.ಕೆ ನ್ಯೂಸ್ ಕನ್ನಡ ಚಾನಲ್: ಎಸ್.ವಿ ಸಂಕನಗೌಡ್ರ. ರೋಣ ಗದಗ**

# ಮಹಿಳೆಗೆ ಸ್ವಾವಲಂಬನೆಯ ದಾರಿ ತೋರಿಸುವುದೇ ಸಮಾಜ ಸೇವೆ



**ಮಹಾಲಿಂಗಪುರ :** ಮಹಿಳೆಯರಿಗೆ ದುಡಿಯುವ ಕೌಶಲ್ಯ ಕಲಿಸಿ ಸ್ವಾಭಿಮಾನದಿಂದ ಬದುಕುವ ಅವಕಾಶ ಕಲ್ಪಿಸುವುದೇ ನಿಜವಾದ ಸಮಾಜ ಸೇವೆ. ಆ ಕೆಲಸವನ್ನು ನಿಸ್ವಾರ್ಥದಿಂದ ಮಾಡಿದ ಚನ್ನಬಸು ಹುರಕಡ್ಲಿ ಮತ್ತು ಸ್ಫೂರ್ತಿ ಸಂಸ್ಥೆಯ ಕಾರ್ಯ ಅತ್ಯಂತ ಮಾದರಿಯದಾಗಿದೆ ಎಂದು ಜಿಲ್ಲಾ ಪಂಚಾಯತ್ ಮಾಜಿ ಸದಸ್ಯ ಮಹಾಂತೇಶ ಹಿಟ್ಟಿನಮಠ ಹೇಳಿದರು.

ಸ್ಥಳೀಯ ಬಸವನಗರ ಸಮುದಾಯ ಭವನದಲ್ಲಿ ಜರುಗಿದ ಉಚಿತ ಸ್ವಯಂ ಉದ್ಯೋಗ ತರಬೇತಿ ಶಿಬಿರದ ಸಮಾರೋಪದಲ್ಲಿ ಮಾತನಾಡಿದ ಅವರು, ಸ್ವಯಂ ಉದ್ಯೋಗದಿಂದ ಮಹಿಳೆಯರಲ್ಲಿ ಸ್ವಾಭಿಮಾನ, ಸ್ವಾವಲಂಬನೆ, ಆತ್ಮವಿಶ್ವಾಸ ಮತ್ತು ವ್ಯಕ್ತಿತ್ವ ವಿಕಸನಕ್ಕೆ ಸಹಕಾರಿ ಎಂದರು.

ಸ್ಥಳೀಯ ಸಿ. ಎಂ. ಹುರಕಡ್ಲಿ ಫೌಂಡೇಶನ್ ಮತ್ತು ಐರಣಿ ಮಹಾ ಸಂಸ್ಥಾನ ಹೊಳೆಮಠ, ಸ್ಫೂರ್ತಿ ನಗರ ಮತ್ತು ಗ್ರಾಮೀಣಾಭಿವೃದ್ಧಿ ಸಂಸ್ಥೆ ದಾವಣಗೆರೆ ಇವರ ಸಹಯೋಗದಲ್ಲಿ ಮಹಿಳೆಯರಿಗೆ 105 ದಿನಗಳ ಉಚಿತ ಸ್ವಯಂ ಉದ್ಯೋಗ ತರಬೇತಿ ನೀಡಿ ಪ್ರಮಾಣ ಪತ್ರ ವಿತರಿಸಲಾಯಿತು.

ಪುರಸಭೆಯ ನೂತನ ನಾಮ ನಿರ್ದೇಶಿತ ಸದಸ್ಯರಾದ ಬಸವರಾಜ ಕರೆಹೊನ್ನ, ಅನಂತನಾಗ ಬಂಡಿ, ಅಪ್ಪಾಸಾಬ ನಾಲಬಂದ, ಲಕ್ಕಪ್ಪ ಭಜಂತ್ರಿ ಹಾಗೂ ಆರೋಗ್ಯ ಸಮಿತಿಯ ನೂತನ ನಾಮ ನಿರ್ದೇಶಿತ ಸದಸ್ಯರಾದ ಮಹಾಲಿಂಗಪ್ಪ ಮಾಳಿ, ಸಂಜು ಅಂಗಡಿ, ಮಾರುತಿ ಚನ್ನದಾಸರ, ಶಿಲ್ಪಾ ಉಪ್ಪಾರ ಹಾಗೂ ಕೌನ್ ಬನೇಗಾ ಕರೋಡ್ ಪತಿಯಲ್ಲಿ ಐವತ್ತು ಲಕ್ಷ ರೂಪಾಯಿ ಗೆದ್ದ ಸ್ಥಳೀಯ ಅಪ್ರತಿಮ ಪ್ರತಿಭೆ ರಂಜಾನ್ ಪೀರಜಾದೆ ಅವರನ್ನು ಸಿ. ಎಂ. ಫೌಂಡೇಶನ್ ವತಿಯಿಂದ ಹಾದಿ9ಕವಾಗಿ ಸನ್ಮಾನಿಸಲಾಯಿತು.

ಸಂಸ್ಥೆಯ ಅಧ್ಯಕ್ಷ ಗುಳ್ಳಪ್ಪ ಗೋಳಸಂಗಿ, ತರಬೇತುದಾರ ಎಂ. ಗುಂಡಪ್ಪ, ಮುಖಂಡರಾದ ಹನುಮಂತ ಶಿರೋಳ, ಮಹಾಲಿಂಗಪ್ಪ ಕಂಠಿ, ವಿಜಯಕುಮಾರ ಸಬಕಾಳೆ, ಪ್ರಕಾಶ ಬಾಡನವರ, ಮಲಕಾಜಪ್ಪ ಹನಗಂಡಿ, ಬಸವರಾಜ ಗಿರಿಸಾಗರ, ಶಿವಾನಂದ ಕೊಣ್ಣೂರ, ಕೃಷ್ಣಾ, ಪುರಸಭೆ ಸದಸ್ಯೆ ಸವಿತಾ ಹುರಕಡ್ಲಿ, ಸುವರ್ಣಾ ಕರೆಹೊನ್ನ, ಸಿಂಧೂರ ಹಲಸಪ್ಪಗೋಳ ಸೇರಿದಂತೆ ಹಲವರು ಉಪಸ್ಥಿತರಿದ್ದರು.

# ಮಕ್ಕಳಿಗೆ ಉತ್ತಮ ಸಂಸ್ಕಾರ, ಸಂಸ್ಕೃತಿ ನೀಡಿ




**ಬನಹಟ್ಟಿ :** ಮಕ್ಕಳಿಗೆ ಪಾಲಕರು ಬಾಲ್ಯದಲ್ಲಿಯೇ ಉತ್ತಮ ಸಂಸ್ಕಾರ, ಸಂಸ್ಕೃತಿ ನೀಡಬೇಕು. ಅವರಲ್ಲಿ ಧಾಮಿ9ಕ, ಸಾಂಸ್ಕೃತಿಕ ಮತ್ತು ವೈಚಾರಿಕ ಪ್ರಜ್ಞೆ ಮೂಡಿಸುವದು ಅವಶ್ಯವಿದೆಯೆಂದು ಹಿರೇಮಠದ ಶರಣಬಸವ ಶಿವಾಚಾರ್ಯರು ಹೇಳಿದರು.

ಬನಹಟ್ಟಿಯ ಕಾಡಸಿದ್ಧೇಶ್ವರ ದೇವಸ್ಥಾನ ಆವರಣದಲ್ಲಿ ಜರುಗಿದ 'ಸಂವರ್ಧನ' ಕಾರ್ಯಕ್ರಮದ ಸಾನಿಧ್ಯ ವಹಿಸಿ ಮಾತನಾಡಿದ ಅವರು, ಇತರೆ ದೇಶಗಳ ಸಂಸ್ಕೃತಿಗಿಂತ ಭಾರತೀಯ ಸಂಸ್ಕೃತಿ ಹಿರಿಯದು. ಮಾನವೀಯ ಸಂಬಂಧಿಗಳಿಗೆ ಅತೀ ಹೆಚ್ಚಿನ ಒತ್ತು ನೀಡಿದ ದೇಶ ನಮ್ಮದು.

ಸೌಹಾರ್ದತೆ, ಸಹಬಾಳ್ವೆ, ಧಾರ್ಮಿಕತೆಯ ಹಿರಿಮೆಯುಳ್ಳ ಪರಂಪರೆ ಭಾರತ ದೇಶದ್ದು. ಇಂತಹ ಐತಿಹಾಸಿಕ ಹಿನ್ನೆಲೆಯುಳ್ಳ ದೇಶವಿಂದು ಎಲ್ಲ ರಂಗದಲ್ಲಿಯೂ ಮುನ್ನಡೆ ಸಾಧಿಸುತ್ತಿದೆ. ಈ ಪರಿಕಲ್ಪನೆಯಿಂದ ದೇಶದ ಸಂಪತ್ತು ಎಂದೇ ಬಣ್ಣಿಸಲಾಗುವ ಮಕ್ಕಳನ್ನು ಸುಸಂಸ್ಕೃತ ಹಾಗು ಸಚ್ಚಾರಿತ್ರ್ಯವುಳ್ಳ ಪ್ರಜೆಗಳನ್ನಾಗಿಸುವ ಮೂಲಕ ಮಕ್ಕಳ ಭವಿಷ್ಯ ಉಜ್ವಲ ಗೊಳಿಸುವಲ್ಲಿ ಪೂರಕ ಕಾರ್ಯ ಪಾಲಕ– ಪೋಷಕರದ್ದೆಂದರು.

ಸಾಹಿತಿ ಯಶವಂತ ವಾಜಂತ್ರಿ ಮಾತನಾಡಿ, ಧರ್ಮದ ಸನ್ಮಾರ್ಗದಲ್ಲಿ ಬದುಕು ನಿರ್ಮಿಸುವ ವ್ಯಕ್ತಿಗೆ ಯಶಸ್ಸು ನಿಶ್ಚಿತ. ಅನ್ಯಾಯ, ಶೋಷಣೆ, ಅನೀತಿ, ಅಧರ್ಮಕ್ಕೆ ಎಂದಿಗೂ ಜಯವಿಲ್ಲ. ದೈವ ಭಕ್ತಿ ಶ್ರದ್ಧೆಯಿಂದ ಸುಖ, ಶಾಂತಿ, ನೆಮ್ಮದಿ ಲಭಿಸಲಿದೆ ಎಂದರು.

ಆಧುನಿಕತೆಯಿಂದಾಗಿ ಸೌಲಭ್ಯ ಹೆಚ್ಚಾದಂತೆ ಧಾರ್ಮಿಕ ಭಾವನೆಗಳು ಇಳಿಮುಖವಾಗುತ್ತಿದೆ. ದಾನ–ಧರ್ಮದ ಕಾರ್ಯಗಳಿಂದ ಮನಸ್ಸು ಸಿರಿವಂತಿಕೆಗೆ ಕಾರಣವೆಂದರು. ಇದೇ ವೇಳೆ ವಿವಿಧ ಕ್ಷೇತ್ರಗಳಲ್ಲಿ ಸಾಧನೆಗೈದ ಸಾಧಕರನ್ನು ಸನ್ಮಾನಿಸಲಾಯಿತು.

ವೇದಿಕೆ ಮೇಲೆ ಬಸವರಾಜ ಕೊಣ್ಣೂರ, ಜಗದೀಶ ಮೈತ್ರಿ, ಸಾಗರ ಚವಜ, ಸದಾಶಿವ ಗೋಂದಕರ, ಸಂಗಪ್ಪ ಉದಗಟ್ಟಿ, ಡಾ. ಇಂದುಮತಿ ಯಂಡೋಳಿ, ಮಲ್ಲಿಕಾರ್ಜುನ ತುಂಗಳ, ಅಜಯ ಬಾಣಕಾರ, ಕುಳ್ಳೊಳ್ಳಿ, ಸರೋಜಿನಿ ಬಳ್ಳಾರಿ, ದುಂಡಪ್ಪ ಗಾಣಿಗೇರ, ದುಂಡಪ್ಪ ಗಿರನ್ನವರ ಸೇರಿದಂತೆ ಅನೇಕರು ಆಸೀನರಾಗಿದ್ದರು.

# ಅಸಂಘಟಿತ ಕಾರ್ಮಿಕರು ನೋಂದಣಿ ಮಾಡಿಸಿಕೊಳ್ಳಿ

**ಮಹಾಲಿಂಗಪುರ :** ಕಾರ್ಮಿಕ ಇಲಾಖೆಯಲ್ಲಿ ಅಸಂಘಟಿತ ಕಾರ್ಮಿಕರು ನೋಂದಣಿ ಮಾಡಿಸಿಕೊಂಡು ಸರ್ಕಾರದ ಸೌಲಭ್ಯಗಳನ್ನು ಪಡೆಯಬೇಕು. ನೋಂದಣಿಗೆ ಯಾವುದೇ ಶುಲ್ಕ ಇರುವದಿಲ್ಲ ಎಂದು ಜಿಲ್ಲಾ ಕಾರ್ಮಿಕ ಇಲಾಖೆ ಅಧಿಕಾರಿ ರಮೇಶ ಸುಂಬಡ ಹೇಳಿದರು.



ಸ್ಥಳೀಯ ಕರ್ನಾಟಕ ರಾಜ್ಯ ನೇಕಾರರ ಸೇವಾ ಸಂಘದ ಕೇಂದ್ರ ಕಚೇರಿಗೆ ಭೇಟಿ ನೀಡಿ ವಿವಿಧ ವೃತ್ತಿಯಲ್ಲಿ ತೊಡಗಿದ ಕಾರ್ಮಿಕರನ್ನುದ್ದೇಶಿಸಿ ಮಾತನಾಡಿದ ಅವರು, ಕಾರ್ಮಿಕ ಸಚಿವ ಸಂತೋಷ ಲಾಡ್ ಅವರು ಅಸಂಘಟಿತ ಕಾರ್ಮಿಕರ ಉದ್ಧಾರಕ್ಕಾಗಿ ತುಂಬಾ ಆಸಕ್ತಿ ವಹಿಸಿದ್ದಾರೆ. ರಾಜ್ಯದಲ್ಲಿ ಸುಮಾರು 50 ಲಕ್ಷಕ್ಕಿಂತ ಹೆಚ್ಚು ಅಸಂಘಟಿತ ಕಾರ್ಮಿಕರು ಕೆಲಸ ಮಾಡುತ್ತಿದ್ದಾರೆ. ತಮ್ಮ ದೂರುಗಳು ಮತ್ತು ಕುಂದು ಕೊರತೆಗಳನ್ನು ಇಲಾಖೆಯ ಗಮನಕ್ಕೆ ತರಲು ಸಹಾಯವಾಣಿ 155214 ಮತ್ತು 1098 ಸಂಖ್ಯೆಗೆ ಕರೆ ಮಾಡಬೇಕು.

ಹಮಾಲರು, ಚಿಂದಿ ಆಯುವವರು, ಮನೆಗಳಿಗೆ ತೆರಳಿ ಕೆಲಸ ಮಾಡುವವರು, ಟೇಲರ, ಅಗಸರು, ಕ್ಷೌರಿಕರು, ಅಕ್ಕಸಾಲಿಗರು, ಕಮ್ಮಾರರು, ಕುಂಬಾರರು, ಬಟ್ಟೆ ಕಾರ್ಮಿಕರು, ನೇಕಾರರು,ಪತ್ರಿಕಾ ವಿತರಕರು, ಅಲೆಮಾರಿ ಪಂಗಡದವರು, ಬೀಡಿ ಕಾರ್ಮಿಕರು, ಕಲ್ಯಾಣ ಮಂಟಪ ಕಾರ್ಮಿಕರು, ಸಭಾಭವನ, ಟೆಂಟ್, ಪೆಂಡಾಲ ಕೆಲಸ ನಿರ್ವಹಿಸುವ ಕಾರ್ಮಿಕರು, ಸ್ವತಂತ್ರ ಲೇಖನ ಬರಹಗಾರರು, ಫೋಟೋಗ್ರಾಫರ್, ಹೊಟೆಲ್ ಕಾರ್ಮಿಕರು, ಬೀದಿ ಬದಿ ವ್ಯಾಪಾರಿಗಳು, ಸಿನಿಮಾ ಮತ್ತು ಸಾಂಸ್ಕೃತಿಕ ಕಾರ್ಯಕರ್ತರು, ಫೂಡ್ ರೈಸರ್ಸ, ಖಾಸಗಿ ವಾಣಿಜ್ಯ ಚಾಲಕರು, ಮೇದಾರರು, ಭಜಂತ್ರಿ ಇವರೆಲ್ಲರನ್ನೂ ಅಸಂಘಟಿಕ ಕಾರ್ಮಿಕರ ವ್ಯಾಪ್ತಿಯಲ್ಲಿ ತರಲಾಗಿದೆ. ಇಎಸ್ಐ, ಪಿಎಫ್ ಮತ್ತು ತೆರಿಗೆ ಕಟ್ಟದವರು ಈ ಕೆಟಗರಿಯಲ್ಲಿ ಸೇರುತ್ತಾರೆ.

ಈ ಎಲ್ಲ ಕೆಟಗರಿ ಕಾರ್ಮಿಕರ ಆರ್ಥಿಕ ಪ್ರಗತಿಗೆ ಹಾಗೂ ಸಾಮಾಜಿಕ ಭದ್ರತೆಗೆ ಸರ್ಕಾರ ಅಂಬೇಡ್ಕರ ಸಹಾಯ ಹಸ್ತ ಯೋಜನೆಯಡಿ ಮಂಡಳಿ ನಿರ್ಮಾಣ ಮಾಡಿದೆ.

ಈ ಮಂಡಳಿಯಲ್ಲಿ ಸುಮಾರು ರೂ. 54 ಕೋಟಿ ಮೀಸಲಾಗಿಡಲಾಗಿದೆ. ನೇಕಾರರು, ಗ್ಯಾರೇಜ ಕಾರ್ಮಿಕರು, ಟೇಲರ್ಗಳು ಮುಂತಾದವರು ಕಾರ್ಮಿಕ ಇಲಾಖೆಯಿಂದ ಹೊರಡಿಸಲಾದ ವೆಬ್ಸೈಟ್ನಲ್ಲಿ ತಮ್ಮ ಫೋಟೋ ಆಧಾರ ಕಾರ್ಡ, ರೇಷನ್ ಕಾರ್ಡ, ಬ್ಯಾಂಕ ಪಾಸ್ ಬುಕ್ ಹಾಕಬೇಕು. ಕಾರ್ಮಿಕ ಕಾರ್ಡ ಅಗುವವರೆಗೂ ಸ್ಮಾರ್ಟ ಕಾರ್ಡ ನೀಡಲಾಗುವದು. ಈ ಕಾರ್ಡ ಪಡೆದ ಕಾರ್ಮಿಕ ಅಪಘಾತದಲ್ಲಿ ನಿಧನರಾದರೆ ರೂ. 1 ಲಕ್ಷ, ಗಾಯಗೊಂಡರೆ ರೂ. 50 ಸಾವಿರ, ಸಹಜ ಮರಣ ಹೊಂದಿದರೆ ರೂ. 10 ಸಾವಿರ ನೀಡಲಾಗುವದು. ಕಾರಣ ಅಸಂಘಟಿತ ಕಾರ್ಮಿಕರು ಪ್ರತಿಯೊಬ್ಬರೂ ನೋಂದಣಿ ಮಾಡಿಕೊಂಡು ಸೌಲಭ್ಯಗಳನ್ನು ಪಡೆಯಬೇಕು ಎಂದರು.

ರಾಜ್ಯ ನೇಕಾರ ಸೇವಾ ಸಂಘದ ರಾಜ್ಯಾಧ್ಯಕ್ಷ ಶಿವಲಿಂಗ ಟಿರಕಿ ಮಾತನಾಡಿ ಮುಖ್ಯಮಂತ್ರಿ ಹಾಗೂ ಕಾರ್ಮಿಕ ಸಚಿವರು ಅಸಂಘಟಿತ ಕಾರ್ಮಿಕರ ಸಮಸ್ಯೆಯನ್ನು ಗಂಭೀರವಾಗಿ ಪರಿಗಣಿಸಿದ್ದು ರಾಜ್ಯಾದ್ಯಂತ 45 ರಿಂದ 50 ಲಕ್ಷ ಕಾರ್ಮಿಕರ ನೋಂದಣಿ ಮಾಡಿ ಹಲವು ಸೌಲಭ್ಯಗಳನ್ನು ನೀಡುವ ಉದ್ದೇಶ ಹೊಂದಿದ್ದಾರೆ. ಅದರ ಸದುಪಯೋಗ ಮಾಡಿಕೊಳ್ಳಬೇಕು ಎಂದರು.

ನೇಕಾರ ಮುಖಂಡ ರಾಜೇಂದ್ರ ಮಿರ್ಜಿ, ಸೋಮು ಮರೆಗುದ್ದಿ, ಶಂಕರ ಶಿರೋಳ, ರಮೇಶ ನಾಗರಾಳ, ಗಿರಮಲ್ಲಪ್ಪ ಕೈಸೊಲಗಿ, ಸದಾಶಿವ ಮುನ್ನೊಳ್ಳಿ, ಈರಪ್ಪ ಮುದಕವಿ, ಶಂಭು ಕೈಸೊಲಗಿ, ನಾಗಪ್ಪ ಯಾದವಾಡ, ಹಾಜಿಸಾಬ ನಾಲಬಂದ, ಶ್ರೀಶೈಲ ಬ್ಯಾಕೋಡ, ನಾಗಪ್ಪ ಮುದಕವಿ, ಮಲ್ಲು ಕಾಗಿ ಸೇರಿದಂತೆ ಇನ್ನೂ ಹಲವರು ಭಾಗವಹಿಸಿದ್ದರು.

# ಮುದುಗಲ್‌ನಲ್ಲಿ ಐತಿಹಾಸಿಕ ಪರಂಪರೆ ಉಳಿಸಿ ಕಾರ್ಯಕ್ರಮ



**ವರದಿ. ಯಮನೂರಸಾಬ. ನಧಾಫ್.**

**ಮುದುಗಲ್ :** ಲಿಂಗಸಗೂರು ತಾಲೂಕಿನ ಮುದುಗಲ್ ಪಟ್ಟಣದಲ್ಲಿ ಬೆಂಗಳೂರು ಕುಮಾರರಾಮ ಇತಿಹಾಸ ಸಂರಕ್ಷಣಾ ಸಮಿತಿ ಲಿಂಗಸುಗೂರು ಭಂಡಾರ ಪ್ರಕಾಶನ ಇವುರುಗಳ ಸಂಯುಕ್ತ ಆಶ್ರಯದಲ್ಲಿ ಇತಿಹಾಸಿಕ ಪರಂಪರೆ ಉಳಿಸಿ ಕಾರ್ಯಕ್ರಮ ಪಟ್ಟಣದ ಶ್ರೀರಾಮಲಿಂಗೇಶ್ವರ ದೇವಸ್ಥಾನದಲ್ಲಿ ರವಿವಾರ ಜರಗಿತು ಹಿರಿಯ ಮುಖಂಡರಾದ ಗುರುಬಸಪ್ಪ ಸಜ್ಜನ್ ರವರು ಸಸಿಗೆ ನೀರು ಹರಿಸುವ ಮುಖಾಂತರ ಉದ್ಘಾಟನೆ ಮಾಡಿದರು

ವೇದಿಕೆಯ ಮೇಲೆ ಮುದಗಲ್ ಇತಿಹಾಸ ಮತ್ತು ಶಾಸನಗಳು ಮುದುಗಲ್ ಮೊಹರಂ ಆಚರಣೆ ಮತ್ತು ಸಾಹಿತ್ಯ ಹಾಗೂ ಕೃತಿಗಳ ಲೋಕಾರ್ಪಣೆ ಮಾಡಲಾಯಿತು ಕಾರ್ಯಕ್ರಮದ ಅಧ್ಯಕ್ಷತೆ ಕುಮಾರರಾಮ ಇತಿಹಾಸ ಸಂರಕ್ಷಣಾ ಸಮಿತಿ ರಾಜ್ಯಾಧ್ಯಕ್ಷ ರಾಜೇಶ್ ನಾಯಕ ಲಿಂಗಸುಗೂರು ವಹಿಸಿದ್ದರು. ಈ ಸಂದರ್ಭದಲ್ಲಿಸಂಶೋಧಕ ಶಶಿಕುಮಾರ್ ನಾಯಕ್ ಬೆಂಗಳೂರು ಇತಿಹಾಸ ಅಕಾಡೆಮಿ ಕಾರ್ಯಕರಣಿ ಸದಸ್ಯ ಧನಪಾಲ. ಕೆ ಉಪನ್ಯಾಸಕ ಡಾ. ಮಹದೇವಪ್ಪ ನಾಗರಾಳ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮಲ್ಲಿಕಾರ್ಜುನ ಗೌಡೂರು ಹಡಪದ ಸಮಾಜದ ಜಿಲ್ಲಾಧ್ಯಕ್ಷ ಗದ್ದೆಪ್ಪ. ಜಕ್ಕೇರಮಡು ದುರ್ಗಾಸಿಂಗ ಸೇರಿದಂತೆ ಮುಂತಾದವರು ಉಪಸ್ಥಿತರಿದ್ದರು.

# ಎಂಆರ್‌ಎನ್ ಆಯುರ್ವೇದಿಕ್ ಕಾಲೇಜಲ್ಲಿ ವಾರ್ಷಿಕೋತ್ಸವ
## ಶಿಕ್ಷಣಕ್ಕಾಗಿ ಸರ್ವ ತ್ಯಾಗಕ್ಕೂ ಸಿದ್ದ: ಡಾ. ಮುರುಗೇಶ್ ನಿರಾಣಿ

**ಬಾಗಲಕೋಟೆ :** ಗುಣಮಟ್ಟದ ಶಿಕ್ಷಣ ನೀಡಿ ವಿದ್ಯಾರ್ಥಿಗಳ ಭವಿಷ್ಯ ಬದಲಿಸುವ ಶಿಕ್ಷಣಕ್ಕಾಗಿ ಸರ್ವತ್ಯಾಗಕ್ಕೂ ಸಿದ್ಧ ಎಂದು ಡಾ.ಮುರುಗೇಶ್ ನಿರಾಣಿ ತಿಳಿಸಿದರು.

ನಗರದ ಎಂಆರ್ ಎನ್ ಆಯುರ್ವೇದಿಕ್ ಮೆಡಿಕಲ್ ಕಾಲೇಜ್ ಹಾಗೂ ಎಮ್ ಆರ್ ಎನ್ ಇನ್ಸ್ಟಿಟ್ಯೂಟ್ ಆಫ್ ನರ್ಸಿಂಗ್ ಸೈನ್ಸ್ ಅಡಿಯಲ್ಲಿ ಶೃಂಖಲಾ–2024–25 ಹೆಸರಿನಲ್ಲಿ ನಡೆದ ವಾರ್ಷಿಕೋತ್ಸವ ಸಮಾರಂಭದಲ್ಲಿ ಉದ್ಘಾಟನೆ ಮಾಡಿ ಮಾತನಾಡಿದ ಅವರು ಜೀವನದ ಏಳು ಬೀಳುಗಳ ನಡುವೆ ಹಲವು ಸಮಸ್ಯೆಗಳನ್ನು ಎದುರಿಸಿ ನಿಂತು ಈ ಮಟ್ಟಕ್ಕೆ ಬಂದಿರುವ ನಾವುಗಳು ಶಿಕ್ಷಣಕ್ಕಾಗಿ ಸದಾಕಾಲ ಸೇವೆ ಮಾಡಲು ಉತ್ಸುಕರಾಗಿದ್ದೇವೆ ಎಂದರು. ವಿದ್ಯಾರ್ಥಿಗಳ ಭವಿಷ್ಯ ಉಜ್ವಲಗೊಳ್ಳಲಿ ಎಂದು ಆಶಿಸಿದರು.



ಉದ್ಘಾಟಕರಾಗಿ ಆಗಮಿಸಿದ್ದ ಬೆಂಗಳೂರಿನ ಆರ್ ಜಿ ಯುವ್ ಎಚ್ ಎಸ್ ನ ಶನಟ್ ಸದಸ್ಯರಾದ ಡಾ/ ಜೆ ಬಿ ಕೋನರೆಡ್ಡಿ ಅವರು ಮಾತನಾಡುತ್ತಾ ಇಂತಹ ವಿಶಾಲವಾದ ಸಂಸ್ಥೆಯಲ್ಲಿ ಶಿಕ್ಷಣ ಪಡೆಯುತ್ತಿರುವ ನೀವುಗಳೇ ನಿಜಕ್ಕೂ ಪುಣ್ಯವಂತರು ಎಂದರು.

ಮುಖ್ಯ ಅತಿಥಿಯಾಗಿ ಭಾಗವಹಿಸಿದ್ದ ಬೆಂಗಳೂರಿನ ಆಯುಷ್ ಇಲಾಖೆಯ ಸಂಶೋಧನಾ ಅಧಿಕಾರಿಗಳಾದ ಡಾ/ಶಶಿಧರ್ ದೊಡ್ಡಮನಿ ಮಾತನಾಡುತ್ತಾ ಸಂಶೋಧನೆಗಳಿಗೆ ಹೆಚ್ಚು ಮಹತ್ವ ಕೊಡುತ್ತ ಇಲಾಖೆಯ ಧನಸಹಾಯವನ್ನು ಸದುಪಯೋಗಪಡಿಸಿ ಕೊಳ್ಳಬೇಕೆಂದರು.

ಕಾರ್ಯಕ್ರಮದಲ್ಲಿ ವಿಶೇಷ ಸನ್ಮಾನ ಪಡೆದುಕೊಂಡ ಎಂ ಆರ್ ಎನ್ ಗ್ರೂಪ್ ಆಫ್ ಮೆಡಿಕಲ್ ಇನ್ಸ್ಟಿಟ್ಯೂಷನ್ ನ ಡೀನ್/ ಆಡಳಿತಾಧಿಕಾರಿಯಾದ ಡಾ/ ಶಿವಕುಮಾರ್ ಗಂಗಾಲ ಸಂಸ್ಥೆಯ ಭವಿಷ್ಯದ ರೂಪುರೇಷೆಗಳನ್ನು ತಿಳಿಸಿ ಶಿಕ್ಷಕರು ಹಾಗೂ ವಿದ್ಯಾರ್ಥಿಗಳಲ್ಲಿ ಉತ್ಸಾಹ ತುಂಬಿದರು.

2023–24 ನೇ ಸಾಲಿನಲ್ಲಿ ಉತ್ತಮ ಅಂಕ ಗಳಿಸಿದ ವಿದ್ಯಾರ್ಥಿಗಳಿಗೆ ಸನ್ಮಾನಿಸಲಾಯಿತು.

ಸಂಸ್ಥೆಯ ಅಧ್ಯಕ್ಷರಾದ ಮಾಧುರಿ ಮುಧೋಳ್, ಮೆಡಿಕಲ್ ಕಾಲೇಜಿನ ಪ್ರಾಂಶುಪಾಲರಾದ ಡಾ/ ಪ್ರಹ್ಲಾದ ಗಂಗಾವತಿ ಕಾಲೇಜಿನ ಡೀನ್/ ಆಡಳಿತ ಅಧಿಕಾರಿಯಾದ ಡಾ/ಶಿವಕುಮಾರ್ ಗಂಗಾಲ, ಬೆಂಗಳೂರಿನ ಆರ್ ಜಿ ಯುವ್ ಎಚ್ ಎಸ್ ನ ಡೆಪ್ಯೂಟಿ ರೆಜಿಸ್ಟರ್ ಆದ ಡಾ.ಸಂತೋಷ್ ಯಡಹಳ್ಳಿ ಕಾಲೇಜಿನ ಹಿರಿಯ ಉಪನ್ಯಾಸಕ ವರ್ಗ ಹಾಗೂ ವಿದ್ಯಾರ್ಥಿ ವಿದ್ಯಾರ್ಥಿನಿಯರು, ಪೋಷಕರು ಪಾಲ್ಗೊಂಡಿದ್ದರು.

ಡಾ/ ಈಶ್ವರ್ ಪಾಟೀಲ್ ಸ್ವಾಗತಿಸಿದರು. ಡಾ/ ಅಂಜನಾ ಕೃಷ್ಣನ್ ನಿರೂಪಿಸಿದರು. ಡಾ/ ದೀಪಾ ಗಂಗಾಲ ವಂದಿಸಿದರು.

# ವಿದ್ಯೆ ಕಲಿತ ಸರ್ಕಾರಿ ಶಾಲೆಗೆ ಡೇಸ್ಕ್ / ಟೇಬಲ್ ದಾನ ನೀಡಿದ ಅಧಿಕಾರಿ ಶ್ರೀರಂಗ ಜೋಶಿ ಕಾರ್ಯಕ್ಕೆ ಮೆಚ್ಚುಗೆ

**ಅಥಣಿ :** ಅಧಿಕಾರಿ ಒಬ್ಬರು ತಾವು ವಿದ್ಯೆ ಕಲಿತ ಸರ್ಕಾರಿ ಶಾಲೆಗೆ ತಮ್ಮ ಸಂಬಳದಲ್ಲಿ 1 ಲಕ್ಷ 40 ಸಾವಿರ ರೂಗಳ ವೆಚ್ಚದಲ್ಲಿ 40 ಡೇಸ್ಕ್ ಹಾಗೂ 4 ಟೇಬಲ್‌ಗಳನ್ನು ದಾನ ರೂಪದಲ್ಲಿ ನೀಡುವ ಮೂಲಕ ಸರ್ಕಾರಿ ಶಾಲೆಗಳ ಪುನಶ್ಚೇತನಕ್ಕೆ ಕೈಜೋಡಿಸುವ ಮೂಲಕ ಅನೇಕ ಅಧಿಕಾರಿಗಳಿಗೆ ಮಾದರಿಯಾಗಿದ್ದಾರೆ. ಅವರ ಈ ಕಾರ್ಯಕ್ಕೆ ಸಾರ್ವಜನಿಕರು ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ.



ಪಟ್ಟಣದ ವಿಕ್ರಮಪೂರ ಬಡಾವಣೆಯಲ್ಲಿ ಇರುವ ಸರಕಾರಿ ಪ್ರಾಥಮಿಕ ಶಾಲೆಯಲ್ಲಿ ವ್ಯಾಸಂಗ ಮಾಡಿರುವ ಅಥಣಿ ಪ್ರಾದೇಶಿಕ ಸಾರಿಗೆ ಇಲಾಖೆಯ ಕಚೇರಿಯ ಅಧೀಕ್ಷಕರಾಗಿರುವ ಶ್ರೀರಂಗ ಜೋಶಿ ಅವರು ದಾನವಾಗಿ ನೀಡಿರುವ ಡೇಸ್ಕಗಳನ್ನು ಶಾಲೆಯ ಮುಖ್ಯೋಪಾಧ್ಯಾಯರಿಗೆ ಹಾಗೂ ಶಿಕ್ಷಕರಿಗೆ ಇಂದು ಶುಕ್ರವಾರ ಹಸ್ತಾಂತರ ಮಾಡಿದರು.

ಈ ಸಂದರ್ಭದಲ್ಲಿ ಶಾಲೆಯ ಎಸ್ ಡಿ ಎಂ ಸಿ ಅಧ್ಯಕ್ಷ ರಾಕೇಶ ಮೈಗೂರ ಮಾತನಾಡಿ ಖಾಸಗಿ ಶಾಲೆಗಳ ಪೈಪೋಟಿಯ ನಡುವೆ ಸರ್ಕಾರಿ ಶಾಲೆಗಳು ಅನೇಕ ಮೂಲಭೂತ ಸೌಕರ್ಯಗಳ ಕೊರತೆಯನ್ನು ಅನುಭವಿಸುತ್ತಿವೆ. ಬಡ ಹಾಗೂ ಮಧ್ಯಮ ವರ್ಗದ ಕುಟುಂಬದ ಮಕ್ಕಳು ಈ ಸರ್ಕಾರಿ ಶಾಲೆಯಲ್ಲಿ ಓದುತ್ತಿರುವುದರಿಂದ ಅನೇಕ ಸಂಘ ಸಂಸ್ಥೆಗಳು ಸಹಾಯ ಸಹಕಾರ ನೀಡುವುದು ಇಂದಿನ ಅಗತ್ಯವಾಗಿದೆ. ನಮ್ಮ ವಿಕ್ರಮ್ ಪೂರ ಬಡಾವಣೆಯಲ್ಲಿರುವ ಈ ಸರ್ಕಾರಿ ಕನ್ನಡ ಪ್ರಾಥಮಿಕ ಶಾಲೆಗೆ ಅನೇಕ ಶಿಕ್ಷಣ ಪ್ರೇಮಿಗಳು, ಅಧಿಕಾರಿಗಳು ದಾನ ರೂಪದಲ್ಲಿ ಪರಿಕರಗಳನ್ನು ಒದಗಿಸಿದ್ದಾರೆ. ಇಂದು ಆರ್ ಟಿ ಓ ಕಚೇರಿಯ ಅಧಿಕಾರಿಯಾಗಿರುವ ಶ್ರೀರಂಗ ಜೋಶಿ ಅವರು ನಮ್ಮ ಶಾಲೆಗೆ ಡೆಸ್ಕ್ ಮತ್ತು ಟೇಬಲ್ ಒದಗಿಸಿದ್ದಾರೆ. ಅವರಿಗೆ ನನ್ನ ಪರವಾಗಿ ಶಿಕ್ಷಕರ ಪರವಾಗಿ ಹಾಗೂ ಎಲ್ಲ ವಿದ್ಯಾರ್ಥಿಗಳ ಪರವಾಗಿ ಅವರಿಗೆ ನಮ್ಮ ತುಂಬು ಹೃದಯದಿಂದ ಅಭಿನಂದಿಸುತ್ತೇನೆ ಎಂದರು

ಈ ವೇಳೆ ಪ್ರಾದೇಶಿಕ ಸಾರಿಗೆ ಇಲಾಖೆಯ ಕಚೇರಿಯ ಅಧೀಕ್ಷಕ ಶ್ರೀರಂಗ ಜೋಶಿ ಮಾತನಾಡಿ ನಾನು ಈ ಶಾಲೆಯ ಹಳೆಯ ವಿದ್ಯಾರ್ಥಿಯಾಗಿದ್ದು, ಸರಕಾರಿ ಶಾಲೆಯಲ್ಲೆ ಕಲಿತು ಇಂದು ಸರಕಾರಿ ನೌಕರಿಯಲ್ಲಿ ಸೇವೆ ಸಲ್ಲಿಸುತ್ತಿದ್ದೇನೆ. ನಾನು ಕಲಿತಿರುವ ಶಾಲೆಗೆ ಏನಾದರೂ ಮಾಡಬೇಕು ಎನ್ನುವ ಆಲೋಚನೆ ಬಹಳ ಹಿಂದಿನಿಂದಲೂ ಇತ್ತು ಅದಕ್ಕಾಗಿ ಮಕ್ಕಳ ಶಿಕ್ಷಣಕ್ಕೆ ಅನುಕೂಲವಾಗಲೆಂದು ಡೆಸ್ಕ್ ಮತ್ತು ಟೇಬಲ್ ನೀಡಲು ನೀಡುತ್ತಿದ್ದೇನೆ ಎಂದು ಹೇಳಿದರು.

ಈ ವೇಳೆ ಅಧಿಕಾರಿ ಎ ಎ ದೇಶಮುಖ, ಕ್ಷೇತ್ರ ಸಮನ್ವಯ ಅಧಿಕಾರಿ ಗೌಡಪ್ಪ ಖೋತ, ಸಂಪನ್ಮೂಲ ವ್ಯಕ್ತಿ ಎ.ಎಂ. ಹೈಭತ್ತಿ, ಮುಖ್ಯೋಪಾಧ್ಯಾಯ ಎಸ್ ಎ ಚೌಗಲಾ, ಶಿಕ್ಷಕರಾದ ಎಸ್ ಎಸ್ ಮುಗಳಖೋಡ, ಜಿ ಎನ್ ಬಡಿಗೇರ, ಡಿ ಎ ಬರಡಗಿ, ವಿ ಎಸ್ ವಾಘಮೋಡೆ, ಎ. ಎಫ್. ಕೋರಬು ಸೇರಿದಂತೆ ಅನೇಕರು ಉಪಸ್ಥಿತರಿದ್ದರು.

# ಸದೃಢ ಆರೋಗ್ಯಕ್ಕೆ ಶಿಕ್ಷಣದ ಜೊತೆ ಕ್ರೀಡೆ ಅಗತ್ಯ: ಶಿವಾನಂದ ದಿವಾನಮಳ

**ಅಥಣಿ :** ಮಕ್ಕಳು ಆಟೋಟಗಳಲ್ಲಿ ಭಾಗವಹಿಸುವುದರಿಂದ ದೇಹದ ಸರ್ವಾಂಗೀಣ ಬೆಳವಣಿಗೆಯಾಗುವುದಲ್ಲದೇ ಸದೃಢ ಆರೋಗ್ಯ ನಿರ್ಮಾಣವಾಗುತ್ತದೆ ಕ್ರೀಡೆಗಳಿಂದ ಮನಸ್ಸು ಉಲ್ಲಾಸ ಭರಿತವಾಗುತ್ತದೆ. ಮಕ್ಕಳು ಸದೃಢ ಹಾಗೂ ಸಶಕ್ತರಾಗಬೇಕಾದರೆ ಮಕ್ಕಳು ಕ್ರೀಡಾ ಕೂಟಗಳಲ್ಲಿ ಭಾಗವಹಿಸಬೇಕು ಎಂದು ಮರುಳ ಶಂಕರ ದೇವರು ಶಾಲೆಯ ಅಧ್ಯಕ್ಷ ಶಿವಾನಂದ ದಿವಾನಮಳ ಹೇಳಿದರು



ಅವರು ಹೆಣ್ಣಾಗಲಿ ಗಂಡಾಗಲಿ ಮನೆಗೊಂದು ಕ್ರೀಡಾಪಟು ಇರಲಿ ಎಂಬ ಧ್ಯೇಯ ವಾಕ್ಯದೊಂದಿಗೆ ಆರಂಭವಾದ ಮರುಳ ಶಂಕರ ದೇವರು ಶಾಲೆಯ 2024–25 ನೇ ಸಾಲಿನ ಶಾಲಾ ವಾರ್ಷಿಕ ಕ್ರೀಡಾಕೂಟವನ್ನು ಉದ್ಘಾಟಿಸಿ ಮೇಜರ್ ಧ್ಯಾನಚಂದ್ ಸಿಂಗ್ ಅವರ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿ ಚಾಲನೆ ನೀಡಿ ಮಾತನಾಡುತ್ತಿದ್ದರು.

ಇವತ್ತಿನ ಮಕ್ಕಳು ಕಂಪ್ಯೂಟರ ಗೇಮ್ ಗಳನ್ನು ಆಡುತ್ತಿರುವುದರಿಂದ ಅವರ ಮುಖದಲ್ಲಿ ಮಂದಹಾಸ ಇಲ್ಲ ದೇಹದಲ್ಲಿ ಸದೃಢತೆ ಇಲ್ಲದನ್ನು ನಾವು ದಿನ ನಿತ್ಯ ಕಾಣುತ್ತಿದ್ದೇವೆ ಹಾಗಾಗಿ ಕ್ರೀಡೆಗಳು ಮಕ್ಕಳು ಜೀವನದಲ್ಲಿ ಚೈತನ್ಯ ಹಾಗೂ ಲವಲವಿಕೆಯಿಂದಿರಲು ಸಹಾಯಕವಾಗುತ್ತವೆ ಎಂದರು.

ಕಾರ್ಯಕ್ರಮದ ಮುಖ್ಯ ಅತಿಥಿಯಾಗಿ ದೈಹಿಕ ಶಿಕ್ಷಕರ ಸಂಘದ ತಾಲೂಕಾ ಅಧ್ಯಕ್ಷ ಗುಲಾಬ ಅತ್ತಾರ ಮಾತನಾಡಿ ವಿದ್ಯಾರ್ಥಿಗಳು ಪಠ್ಯದ ಜೊತೆಗೆ ಪಠ್ಯೇತರ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ಭಾಗವಹಿಸಬೇಕು. ಕ್ರೀಡೆಗಳು ದೇಹ ಮನಸ್ಸುಗಳ ಸದೃಢತೆಗೆ ಸಹಕಾರಿಯಾಗಲಿದೆ. ಸುಂದರವಾದ ದೇಹದಲ್ಲಿ ಸುಂದರವಾದ ಮನಸ್ಸು ಇರುತ್ತದೆ. ರೋಗಿಯಾಗಿ ನೂರು ವರ್ಷ ಬದುಕುವುದಕ್ಕಿಂತ ನಿರೋಗಿಯಾಗಿ 3 ವರ್ಷ ಬದುಕುವದು ಲೇಸು ಎಂದರು.

ಆನಂತರ ಸಿಆರ್ ಪಿ ನಿಂಗಯ್ಯ ಹಿರೇಮಠ ಕ್ರೀಡಾ ಜ್ಯೋತಿ ಬೆಳಗಿಸುವ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿ ಮಕ್ಕಳು ಕ್ರಿಯಾಶೀಲರಾಗಿರಬೇಕು ಮಕ್ಕಳಿಗೆ ಪಾಠದ ಜೊತೆಗೆ ಕ್ರೀಡೆಗಳು ಕೂಡಾ ಅಷ್ಟೇ ಅವಶ್ಯಕವಾಗಿದೆ ಸರ್ಕಾರ ಪಾಠದ ಜೊತೆಗೆ ದೈಹಿಕ ಶಿಕ್ಷಣವನ್ನು ಒಂದು ವಿಷಯವನ್ನಾಗಿ ಪರಿಗಣಿಸಿದೆ ವಿದ್ಯಾರ್ಥಿಗಳು ನಿತ್ಯ ಪಠ್ಯದ ಜತೆಗೆ ಕ್ರಿ?ಡಾ ಚಟುವಟಿಕೆಗಳಲ್ಲಿ ಭಾಗವಹಿಸುವುದರಿಂದ ಬೌದ್ಧಿಕ ಹಾಗೂ ಶಾರೀರಿಕ ಬೆಳವಣಿಗೆ ಸಾಧ್ಯವಾಗುತ್ತದೆ ಎಂದರು

ಈ ವೇಳೆ ಸಂಸ್ಥೆಯ ಕಾರ್ಯದರ್ಶಿ ರಾಮನಗೌಡ ಪಾಟೀಲ ಮಾತನಾಡಿ ವಿದ್ಯಾರ್ಥಿಗಳು ವಿದ್ಯಾರ್ಜನೆ ಜೊತೆಗೆ ಕ್ರೀಡಾಸಕ್ತಿಯನ್ನು ಬೆಳೆಸಿಕೊಳ್ಳಬೇಕು. ಆಟಗಳಲ್ಲಿ ಸೋಲು, ಗೆಲುವು ಸಹಜ. ಅಲ್ಲದೇ ನಿರಂತರ ಪ್ರಯತ್ನದಿಂದ ಯಶಸ್ಸು ಸಾಧಿಸುತ್ತೇನೆ ಎಂಬ ಛಲ ಹೊಂದಬೇಕು ಎಂದ ಅವರು ದಿನ ಕಳೆದಂತೆ ನಮ್ಮ ಜೀವನದಿಂದ ಹಳೆಯ ಕ್ರೀಡೆಗಳು ಮಾಯವಾಗುತ್ತಿವೆ ಎಂದು ಕಳವಳ ವ್ಯಕ್ತಪಡಿಸಿದರು.

ಈ ವೇಳೆ ಸಂಸ್ಥೆಯ ಕಾರ್ಯದರ್ಶಿ ರಾಮನಗೌಡ ಪಾಟೀಲ. ಸದಸ್ಯರುಗಳಾದ ದುಂಡಪ್ಪ ಗೊಟ್ಟಿ. ಮಹಾಂತೇಶ ತೇರದಾಳ. ಸುರೇಶ ಹೊನ್ನೊಳ್ಳಿ. ಮುರಗೇಪ್ಪಾ ದಿವಾನಮಳ. ಬಸವರಾಜ ಕೋಟಿ. ಸದಾಶಿವ ಭಡಕಂಬಿ. ಗುರುಪಾದಯ್ಯ ಮೊರಬಾಗಿ. ಶಾಲೆಯ ಆಡಳಿತಾಧಿಕಾರಿ ವಿ ಎ ನಾಗಣಿ. ಮಂಜುನಾಥ ಚೌಗಲಾ. ಸೇರಿದಂತೆ ಶಾಲೆಯ ಶಿಕ್ಷಕರು/ ಶಿಕ್ಷಕಿಯರು ಸಿಬ್ಬಂದಿ ವರ್ಗದವರು. ಕೆಎಲ್ಇ ಸಂಸ್ಥೆಯ ಬಿಎಡ್ ಪ್ರಶಿಕ್ಷಣಾರ್ಥಿಗಳು ಸೇರಿದಂತೆ ವಿದ್ಯಾರ್ಥಿ/ ವಿದ್ಯಾರ್ಥಿನಿಯರ ಉಪಸ್ಥಿತರಿದ್ದರು.

ಶಿಕ್ಷಕ ಕರಣ ಹಿಡಕಲ್ ಕಾರ್ಯಕ್ರಮ ನಿರೂಪಿಸಿ ವಂದಿಸಿದರು.

# ತೋಟಗಾರಿಕೆ ಇಲಾಖೆಯ 217ನೇ ಫಲಪುಷ್ಪ ಪ್ರದರ್ಶನ
## "ಥಾಯ್ ಆರ್ಟ್"ನಲ್ಲಿ ಮೂರನೇ ಸ್ಥಾನ ಪಡೆದ ಕಲಾವಿದೆ ತೇಜಸ್ವಿ ಜಿ.

ಬೆಂಗಳೂರಿನಲ್ಲಿ ಜನವರಿ 16 ರಿಂದ 26, 2025 ರವರೆಗೆ ನಡೆಯಲಿರುವ ಲಾಲ್‌ಬಾಗ್ ಪುಷ್ಪ ಪ್ರದರ್ಶನವು ರಾಮಾಯಣವನ್ನು ಚಿತ್ರಿಸುವ ಪುಷ್ಪ ಪ್ರದರ್ಶನಗಳ ಮೂಲಕ ಋಷಿ ವಾಲ್ಮೀಕಿಗೆ ಗೌರವ ಸಲ್ಲಿಸಲಾಗುತ್ತಿದೆ. ಈ ಕಾರ್ಯಕ್ರಮದಲ್ಲಿ ಸಾಂಸ್ಕೃತಿಕ ಪ್ರದರ್ಶನಗಳು, ಕಾರ್ಯಾಗಾರಗಳು ಮತ್ತು ಪ್ರದರ್ಶನಗಳು, ಲಕ್ಷಕ್ಕೂ ಬಗೆಯ ಹೂವುಗಳು, ಪ್ರಕೃತಿ ಮತ್ತು ಸಂಸ್ಕೃತಿಯನ್ನು ವಿಶಿಷ್ಟ ಆಚರಣೆಯಲ್ಲಿ ಸಂಯೋಜಿಸುವ ಮೂಲಕ 10ದಿನಗಳ ಕಾಲ ಗಣರಾಜ್ಯೋತ್ಸವ ಪ್ರಯುಕ್ತ ನಡೆಯಲಿದೆ.



ಇದೇ ಸಂದರ್ಭದಲ್ಲಿ ತೋಟಗಾರಿಕೆ ಇಲಾಖೆಯಿಂದ ಲಾಲ್‌ಬಾಗ್ ಸಸ್ಯಶಾಸ್ತ್ರೀಯ ತೋಟದಲ್ಲಿ ಹಮ್ಮಿಕೊಂಡಿದ್ದ, 2025ನೇ ಸಾಲಿನ ಗಣರಾಜ್ಯೋತ್ಸವ ಪ್ರಯುಕ್ತ, ಆದಿಕವಿ ಮಹರ್ಷಿ ವಾಲ್ಮೀಕಿ ವಿಷಯಾದಾರಿಕ 217ನೇ ಫಲಪುಷ್ಪ ಪ್ರದರ್ಶನದಲ್ಲಿ ಇಕೆಬಾನ್, ಥಾಯ್ ಆರ್ಟ್, ತರಕಾರಿ ಕೆತ್ತನೆ, ಪುಷ್ಪ ರಂಗೋಲಿ, ಜಾನೂರು ಹಾಗೂ ಪೂರಕ ಕಲೆಗಳ ಪ್ರದರ್ಶನ ಮತ್ತು ಕಾರ್ಯಾಗಾರ ಹಮ್ಮಿಕೊಳ್ಳಲಾಗಿತ್ತು. ಶ್ರೀ ರಮೇಶ್ ಎಸ್. ನಿರ್ದೇಶಕರು ಮತ್ತು ತೋಟಗಾರಿಕೆ ಇಲಾಖೆಯ ಜಂಟಿ ಹಾಗೂ ಉಪನಿರ್ದೇಶಕರು, ಅಧಿಕಾರಿಗಳ ಸಹಕಾರದಲ್ಲಿ ನಡೆದ ಕಾರ್ಯಾಗಾರದಲ್ಲಿ ಬೆಂಗಳೂರಿನ ನೂರಕ್ಕೂ ಹೆಚ್ಚು ಕಲಾವಿದರು ಭಾಗವಹಿಸಿದ್ದರು.

ಥಾಯ್ ಆರ್ಟ್ : ಥಾಯ್ ಸಂಸ್ಕೃತಿಯ ಹಬ್ಬಗಳಿಗೆ, ಬಾಳೆ ಎಲೆಗಳನ್ನು ಮಡಚಿ ವರ್ಣರಂಜಿತ ಅಲಂಕಾರಗಳನ್ನು ಮಾಡುತ್ತಾರೆ. ದೇವಾಲಯದಲ್ಲಿ ಬುದ್ಧನಿಗೆ ಅರ್ಪಿಸುವ ಮೊದಲು ಎಲೆಗಳನ್ನು ಸೂಕ್ಷ್ಮ, ತ್ರಿಕೋನ ಮತ್ತು ಸಂಕೀರ್ಣ ಮಾದರಿಗಳಲ್ಲಿ ಮಡಚಲಾಗುತ್ತದೆ. ಬಾಳೆ ಎಲೆಗಳು ಮತ್ತು ಹೂವಿನ ದಳಗಳಿಂದ ಮಾಡಿದ ಧಾರ್ಮಿಕ ಅರ್ಪಣೆಗಳನ್ನು "ಬಾಯಿ ಶ್ರೀ" ಎಂದು ಕರೆಯಲಾಗುತ್ತದೆ.

ವಿಶೇಷವಾಗಿ ಥಾಯ್ ಆರ್ಟ್ ಕಲಾವಿದೆ ಶ್ರೀಮತಿ ಜಯಂತಿ ರತನ್, ಬೆಂಗಳೂರು ಇವರ ನೇತೃತ್ವದಲ್ಲಿ ನಡೆದ "ಥಾಯ್ ಆರ್ಟ್" ಕಾರ್ಯಾಗಾರದಲ್ಲಿ, ನಗರದ ಕರಕುಶಲ ಕಲಾವಿದರಾದ ಆರ್. ಸುಧಾ ಸದಾನಂದ, ಬಿ.ಎಂ. ಲೀಲಾವತಿ, ಅನುಷಾ ಆರ್., ಸುಜಾತ ಎಂ., ದಿವ್ಯ ಎ.ವಿ., ನಂದಿನಿ ಎಸ್., ದಿವ್ಯನಂದನ್, ಮಂಜು ಎಂ., ಸ್ತುಥಿ ಎಂ., ತೇಜಶ್ರೀ ರವಿ, ಚೈತ್ರ, ಪದ್ಮಶ್ರೀ, ಅಶ್ವಿನಿ ಬಡಿತಲಾ, ಭೂಮಿಕ, ವಿದ್ಯಾ ಕೆ.ಪಿ., ಕೃಪಾ, ಪೂಜಿತಾ ಎಂ., ಪ್ರತಿಮಾ ವೋರಾ, ತ್ರೀಷಾ, ಯೋಗೇಶ್ವರಿ, ಕೌಸಲ್ಯ ಗೌತಮ್, ತೇಜಸ್ವಿ ಜಿ. ರವರು ಭಾಗವಹಿಸಿ, 15 ದಿನಗಳ ಕಾಲ ನಡೆದ ಕಾರ್ಯಾಗಾರವನ್ನು ಯಶಸ್ವಿಗೊಳಿಸಿದರು. ಇದೇ 217ನೇ ಫಲಪುಷ್ಪ ಪ್ರದರ್ಶನದಲ್ಲಿ ನಡೆದ ಥಾಯ್ ಆರ್ಟ್ ಸ್ಪರ್ಧೆಯಲ್ಲಿ ಮೊದಲೇ ಸ್ಥಾನ, ತೇಜಶ್ರೀ ರವಿ, ಎರಡನೇ ಸ್ಥಾನ ನಂದಿನಿ ಎಸ್., ಮೂರನೇ ಸ್ಥಾನ ತೇಜಸ್ವಿ ಜಿ. ಯವರಿಗೆ ಲಭಿಸಿದೆ.

ಲಾಲ್‌ಬಾಗ್ ಬೊಟಾನಿಕಲ್ ಗಾರ್ಡನ್ : ಸರಳವಾಗಿ ಲಾಲ್‌ಬಾಗ್ "ಕೆಂಪುಉದ್ಯಾನ" ಎಂದು ಕರೆಲ್ಪಡುತ್ತಾರೆ. ಕರ್ನಾಟಕದ ರಾಜಧಾನಿ ಬೆಂಗಳೂರಿನಲ್ಲಿರುವ ಒಂದು ಸಸ್ಯೋದ್ಯಾನವಾಗಿದ್ದು, 200 ವರ್ಷಗಳಿಗೂ ಹೆಚ್ಚು ಇತಿಹಾಸವನ್ನು ಹೊಂದಿದೆ. ಮೊದಲು ರಾಜ ಹೈದರ್ ಅಲಿಯ ದಳವಾಯಿ ಅವಧಿಯಲ್ಲಿ ಯೋಜಿಸಿ 240 ಎಕರೆಯಲ್ಲಿ ಸ್ಥಾಪಿಸಲಾದ ಈ ಉದ್ಯಾನವನ್ನು ನಂತರ ಭಾರತೀಯ ಸ್ವಾತಂತ್ರ್ಯದ ಮೊದಲು ಹಲವಾರು ಬ್ರಿಟಿಷ್ ಸೂಪರಿಂಟೆಂಡೆಂಟ್‌ಗಳ ಅಡಿಯಲ್ಲಿ ನಿರ್ವಹಿಸಲಾಯಿತು. ಇದು ಹಲವಾರು ಅಲಂಕಾರಿಕ ಸಸ್ಯಗಳು ಮತ್ತು ಆರ್ಥಿಕ ಮೌಲ್ಯದ ಸಸ್ಯಗಳ ಪರಿಚಯ ಮತ್ತು ಪ್ರಸರಣಕ್ಕೆ ಕಾರಣವಾಗಿರುವ ಅದ್ಭುತ ಸ್ಥಳ. ಈ ಉದ್ಯಾನವನ ಮತ್ತು ಮನರಂಜನಾ ಸ್ಥಳವಾಗಿ ಸಾಮಾಜಿಕ ಕಾರ್ಯವನ್ನು ಸಹ ನಿರ್ವಹಿಸುತ್ತದೆ. 1890 ರಿಂದ ಕೇಂದ್ರ ಗಾಜಿನ ಮನೆಯನ್ನು ಹೂವಿನ ಪ್ರದರ್ಶನಗಳಿಗಾಗಿ ಬಳಸಲಾಗುತಿದ್ದು. ಆಧುನಿಕ ಕಾಲದಲ್ಲಿ, ಇದು ಗಣರಾಜ್ಯೋತ್ಸವ (ಜನವರಿ 26) ಮತ್ತು ಸ್ವಾತಂತ್ರ್ಯ ದಿನಾಚರಣೆ (ಆಗಸ್ಟ್ 15) ವಾರಕ್ಕೆ ಹೊಂದಿಕೆಯಾಗುವ ಎರಡು ಹೂವಿನ ಪ್ರದರ್ಶನಗಳನ್ನು ಆಯೋಜಿಸಲಾಗುತ್ತಿದೆ. ಕಬ್ಬನ್ ಪಾರ್ಕ್ ಜೊತೆಗೆ ನಗರದ ಹಸಿರು ಸ್ಥಳವಾಗಿ, ಇದು ಹಲವಾರು ಕಾಡು ಜಾತಿಯ ಪಕ್ಷಿಗಳು ಮತ್ತು ಇತರ ವನ್ಯಜೀವಿಗಳಿಗೆನೆಲೆಯಾಗಿದೆ. ಈ ಉದ್ಯಾನವು ದೊಡ್ಡ ಬಂಡೆಯ ಪಕ್ಕದಲ್ಲಿ ಒಂದು ಸರೋವರವನ್ನು ಸಹ ಹೊಂದಿದೆ, ಅದರ ಮೇಲೆ ಕೆಂಪೇಗೌಡರ ಆಳ್ವಿಕೆಯಲ್ಲಿ ಕಾವಲು ಗೋಪುರವನ್ನು ನಿರ್ಮಿಸಲಾಗಿದೆ.

ರಾಜಧಾನಿಯ ನಿವಾಸಿಗಳು ಹಾಗೂ ಹೊರ ಊರಿನವರು ಬೆಂಗಳೂರಿಗೆ ಬಂದಿದ್ದರೆ, ತಮ್ಮ ಕುಟುಂಬ ಸಮೇತರಾಗಿ 10 ದಿನಗಳ ಕಾಲ ಲಾಲ್‌ಭಾಗ್‌ನಲ್ಲಿ ನಡೆಯುವ ಫಲಪುಷ್ಪ ಪ್ರದರ್ಶನವನ್ನು ಒಮ್ಮೆಯಾದರು ನೋಡಿ, ವಿವಿಧ ಬಗೆಯ ವರ್ಣರಂಜಿತ ಹೂವುಗಳನ್ನು ಕಣ್ತುಂಬಿಕೊಳ್ಳಿ.

**– ಕಿಶನ್ ಸುರ್ವೆ ಸುರ್ವೆ ನ್ಯೂಸ್ ಸೋರ್ಸ್**

# ರಾಜ್ಯಾಧ್ಯಕ್ಷನನ್ನಾಗಿ ವಿಜಯೇಂದ್ರನನ್ನು ಎಂದಿಗೂ ಒಪ್ಪಲ್ಲ: ಯತ್ನಾಳ

**ವಿಜಯಪುರ** : ರಾಜ್ಯಾಧ್ಯಕ್ಷನನ್ನಾಗಿ ನಾವು ವಿಜಯೇಂದ್ರನನ್ನು ಒಪ್ಪಿಕೊಳ್ಳಲಾಗಲ್ಲ. ಅವರಪ್ಪನನ್ನೇ ಜೈಲಿಗೆ ಹಾಕಿಸಿದವನನ್ನು ಹೇಗೆ ಒಪ್ಪಿಕೊಳ್ಳುವುದು. ಅವರಪ್ಪನ ಸಹಿಯನ್ನೇ ನಕಲಿ ಮಾಡಿದವನನ್ನು ನಾವು ಒಪ್ಪಲ್ಲ ಎಂದು ವಿಜಯಪುರ ನಗರ ಬಿಜೆಪಿ ಶಾಸಕ ಬಸನಗೌಡ ಪಾಟೀಲ ಯತ್ನಾಳ ಹೇಳಿದ್ದಾರೆ.

ಭಾನುವಾರ ನಗರದಲ್ಲಿ ಸುದ್ದಿಗಾರರ ಜೊತೆಗೆ ಅವರು ಮಾತನಾಡಿದರು.

ಪಕ್ಷ ಇದಕ್ಕೆ ಅವಕಾಶ ಕೊಡಲ್ಲ, ಹೈಕಮಾಂಡ್ ಗಂಭೀರವಾಗಿ ಪರಿಗಣಿಸಬೇಕೆಂದು ಅವರು ಕೇಳಿಕೊಂಡರು.

ಅವರಪ್ಪನ ಸಹಿ ಮಾಡಿದ ತಪ್ಪಿನಿಂದ ಯಡಿಯೂರಪ್ಪ ಅರೆಸ್ಟ್ ಆಗಿ ಜೈಲು ಪಾಲಾಗಿದ್ದು ವಿಜಯೇಂದ್ರನ ಕೃತ್ಯದಿಂದಲೇ. ಈಗ ಹೊರಗೆ ಪೂಜ್ಯ ತಂದೆ ಎನ್ನುತ್ತಾನೆ. ಮನೆಯಲ್ಲಿ ನಿಂದು ಮುಗಿದಿದೆ ಮುದಿಯಾ ಎನ್ನುತ್ತಾನೆ. ಮಾಧ್ಯಮಗಳ ಮುಂದೆ ಪೂಜ್ಯ ತಂದೆಯವರು ಕಾಲಿಗೆ ಚಕ್ರ ಕಟ್ಟಿಕೊಂಡು ಓಡಾಡಿದ್ದಾರೆ ಎನ್ನುತ್ತಾನೆ. ಮನೆಯಲ್ಲಿ ಬೇರೆ ಇದೆ. ಹೊರಗೆ ಬೇರೆ ನಡೆದಿದೆ ಎಂದು ಹೇಳಿದರು.

ಯಡಿಯೂರಪ್ಪ ಬಹಳ ದೊಡ್ಡವರೇನಲ್ಲ ನಾನು ಅವರೂ ಕೂಡಿಯೇ ಪಕ್ಷ ಕಟ್ಟಿದ್ದೇವೆ. ಅವರು ಮಗನ ವ್ಯಾಮೋಹ ಬಿಟ್ಟು ಪಕ್ಷ ಕಟ್ಟಬೇಕೆಂದು ಯಡಿಯೂರಪ್ಪಗೆ ಸಲಹೆ ನೀಡಿದರು. ಯಡಿಯೂರಪ್ಪಗೆ ಪಕ್ಷ ಎಲ್ಲವನ್ನೂ ಕೊಟ್ಟಿದೆ. ಪಕ್ಷ ಕಟ್ಟಿದ ಬಿ.ವಿ. ಶಿವಪ್ಪ, ಮಲ್ಲಿಕಾರ್ಜುನ ಅಂಥವರಿಗೆ ಅನ್ಯಾಯ ಮಾಡಿದ್ದು ಯಡಿಯೂರಪ್ಪ. ವಾಜಪೇಯಿ ಅಡ್ವಾನಿ ಅವರು ಬಂದಾಗ ಆ ಕಾಲದಲ್ಲೇ ಶಿವಪ್ಪನವರ ಕಾರಿನಲ್ಲಿ ಓಡಾಡುತ್ತಿದ್ದರು. ಆ ಕಾಲದಲ್ಲಿ ಯಾರ ಬಳಿಯೂ ಕಾರು ಇರಲಿಲ್ಲ. ಅವರನ್ನು ಮಣ್ಣಲ್ಲಿ ಇಟ್ಟಿರಿ ಎಂದು ಯಡಿಯೂರಪ್ಪ ಬಗ್ಗೆಯೂ ಅಸಮಾಧಾನ ಹೊರ ಹಾಕಿದರು.

ಈಗ ಯಡಿಯೂರಪ್ಪ ಮೊಮ್ಮಕ್ಕಳ ಜೊತೆಗೆ ಆಟವಾಡಿಕೊಂಡಿರಬೇಕು. ಬರೀ ದುರಾಸೆ ಬಿಡಿ, ನಿಮ್ಮ ಮಗಾ ರಾಜ್ಯಾಧ್ಯಕ್ಷ ಸ್ಥಾನಕ್ಕೆ ಅರ್ಹನಿಲ್ಲ, ಯೋಗ್ಯನಿಲ್ಲವೆಂದು ಖಾರವಾಗಿ ಹೇಳಿದರು.

ಯಾವ ಕಾಲಕ್ಕೂ ವಿಜಯೇಂದ್ರನನ್ನು ನಾವು ಒಪ್ಪಲ್ಲ ಎಂದು ಖಂಡತುಂಡವಾಗಿ ಯತ್ನಾಳ ಹೇಳಿದರು.

ಕರ್ನಾಟಕದಲ್ಲಿ ಬಿಜೆಪಿಯ ಯಾವುದೇ ನಿಷ್ಠಾವಂತ ಕಾರ್ಯಕರ್ತರು ವಿಜಯೇಂದ್ರನನ್ನು ಒಪ್ಪಲ್ಲ. ಕೆಲವೊಂದು ಚೇಲಾಗಳು ಅಸ್ತಿತ್ವ ಇಲ್ಲದ ಮಕ್ಕಳು ಇರುತ್ತಾರೆ. ಅವರು ವಿಜಯೇಂದ್ರಗೆ ಬಹುಪರಾಕ್ ಹಾಕುತ್ತಾರೆ. ರಾಜ್ಯ ಬಿಜೆಪಿಯಲ್ಲಿ ಎರಡು ಹಂದಿಗಳು ಇವೆ. ಅವನ್ನು ಬಿಟ್ಟರೆ ಯಾರೂ ವಿಜಯೇಂದ್ರನ ಪರವಾಗಿ ಮಾತನಾಡುತ್ತಿಲ್ಲ. ಯಾರೂ ವಿಜಯೇಂದ್ರನ ಗುಣಗಾನ ಮಾಡುತ್ತಿಲ್ಲ ಎಂದರು.

ಇನ್ನು ವಿಜಯೇಂದ್ರ ನೀನು ಬಚ್ಚಾ, ನೀನು ಅಧ್ಯಕ್ಷ ಸ್ಥಾನಕ್ಕೆ ಯೋಗ್ಯವಿಲ್ಲ. ಇಂದಿಗೂ ಯಡಿಯೂರಪ್ಪ ನಮ್ಮ ನಾಯಕ ಅದರಲ್ಲಿ ಎರಡು ಮಾತಿಲ್ಲ. ಇಂದಿಗೂ ನಾನು ಯಡಿಯೂರಪ್ಪ ಮೇಲೆ ಅಗೌರವದಿಂದ ಮಾತಾಡಿಲ್ಲ.

ಇಂದಿಗೂ ಅವರ ಮೇಲೆ ಗೌರವ ಇದೆ. ಆದರೆ ನೀನು ಸುಳ್ಳು ಹೇಳುವುದು ಬಿಡು. ನಾನು ಶಿಕಾರಿಪುರಕ್ಕೆ ಬರ್ತಿನಿ, ವಿಜಯೇಂದ್ರ ಮನೆ ಮುಂದಿನಿಂದ ಪ್ರವಾಸ ಶುರು ಮಾಡುವೆ ಎಂದು ರಾಜ್ಯ ಬಿಜೆಪಿ ಆಧ್ಯಕ್ಷ ವಿಜಯೇಂದ್ರ ವಿರುದ್ಧ ಬಿಜೆಪಿ ಶಾಸಕ ರಮೇಶ ಜಾರಕಿಹೊಳಿ ಕಿಡಿ ಕಾರಿ ವಾಗ್ದಾಳಿ ನಡೆಸಿದ್ದನ್ನು ಯತ್ನಾಳ ಈ ಸಂದರ್ಭದಲ್ಲಿ ಸಮರ್ಥಿಸಿಕೊಂಡರು.

# ಕನ್ನಡ ಯುವಕನಿಗೆ ಅಮೆರಿಕದಲ್ಲಿ ನೇಮಕ ಹೃದಯ ಸ್ಪರ್ಶಿ ಸನ್ಮಾನ, ಕಾವ್ಯದಿಂದ ಬೀಳ್ಕೊಡುಗೆ

**ವಿಜಯಪುರ** : ಪ್ರತಿಯೊಬ್ಬರಲ್ಲಿ ಇರುವ ಪ್ರತಿಭೆಯು ಆಧುನಿಕತೆ ಬೆಳೆದಂತೆ ಸೀಮಾತೀತವಾಗಿದೆ, ಪ್ರತಿಭೆಯು ಜಾತಿ,ಧರ್ಮ ಕುಲ, ಬಡವ, ಶ್ರೀಮಂತ, ದೊಡ್ಡವ, ಸಣ್ಣವ ಇವೆಲ್ಲಾ ಸೀಮೆಗಳನ್ನು ಮೀರಿ ಸೀಮಾತೀತವಾಗಿದೆ ಎಂದು ಹಿರಿಯ ವಕೀಲ ಸಾಹಿತಿ ಮಲ್ಲಿಕಾರ್ಜುನ ಭೃಂಗಿಮಠ ಅವರು ಹೇಳಿದರು.



ನಗರದ ಕನ್ನಡದ ಯುವಕ ಅರ್ಜುನ ಮೇಲಿನಕೇರಿ ಅವರನ್ನು ಅಮೆರಿಕ ಕಂಪನಿಯೊಂದಕ್ಕೆ ನೇರ ನೇಮಕವಾದ ಹಿನ್ನಲೆಯಲ್ಲಿ ಅಮೆರಿಕಾಕ್ಕೆ ಹೊರಟ ಕನ್ನಡದ ಯುವಕ ಅರ್ಜುನನಿಗೆ ಕನ್ನಡ ಪರ ಸಂಘಟಕರಿಂದ ಹಮ್ಮಿಕೊಂಡಿದ್ದ ಹೃದಯ ಸ್ಪರ್ಷಿ ಸನ್ಮಾನ ಮತ್ತು ಕಾವ್ಯ ಬೀಳ್ಕೊಡುಗೆ ಸಮಾರಂಭದಲ್ಲಿ ಮುಖ್ಯ ಅತಿಥಿಯಾಗಿ ಮಾತನಾಡುತ್ತಿದ್ದರು.

ಇತಿಹಾಸದ ಪುಟ ತೆಗೆದು ನೋಡಿದಾಗ ಹಲವಾರು ಅನ್ವೇಷಣೆ,ಪ್ರಥಮಗಳಿಗೆ ಕನ್ನಡಿಗರ ಹೆಸರುಗಳೇ ಮೊದಲಿಗೆ ಕಂಡು ಬರುತ್ತವೆ, ಅದನ್ನು ಇಂದಿನ ಪೀಳಿಗೆ ಆಧುನಿಕತೆಯ ತಂತ್ರಜ್ಞಾನದಲ್ಲಿ ಮುಂದುವರೆಸಿಕೊಂಡು ಹೋಗುತ್ತಿರುವುದು ಶ್ಲಾಘನೀಯ, ಯುವ ಶಕ್ತಿ ಎಲ್ಲೆ ಇದ್ದರೂ ಕನ್ನಡಿಗನಾಗಿರಬೇಕು. ಈ ನೆಲ,ಜಲದ ಋಣ ಮರೆಯಬಾರದು, ಈ ನೆಲದ ಸಂಸ್ಕೃತಿ ಸಂಸ್ಕಾರದ ಸಂಪತ್ತು ಬಹಳಷ್ಟು ಅಮೂಲ್ಯವಾಗಿದೆ ಎಂದು ಹೇಳಿದರು.

ಈಗಿನ ಕಾಲಘಟ್ಟದಲ್ಲಿ ದೇಶದಿಂದ ದೇಶಕ್ಕೆ ಹಲವು ಕಾರಣಗಳಿಂದ ಹೋಗುವುದು ಅನಿವಾರ್ಯವಾಗಿದೆ, ಜಗತ್ತು ಆಧುನಿಕತೆಯ ಅಭಿವೃದ್ಧಿಯಿಂದ ಅತೀ ಚಿಕ್ಕದ್ದಾಗಿದೆ ಎಂದರು.

ಹಿರಿಯ ಹೋರಾಟಗಾರ ಡಾ: ಅಂಬೇಡ್ಕರ್ ಪ್ರಶಸ್ರಿ ಪುರಸ್ಕೃತ ಸಾಹಿತಿ ಕಲಾವಿದ ರಘುನಾಥ ಬಾಣಿಕೋಲ ಅವರು ಮಾತನಾಡಿ, ರೈತರ ಮಕ್ಕಳು ತಂತ್ರಜ್ಞಾನದಲ್ಲಿ ಮೇಲುಗೈ ಸಾಧಿಸುತ್ತಿರುವುದಕ್ಕೆ ಅಮೆರಿಕದಂತಹ ಮುಂದುವರೆದ ರಾಷ್ಟ್ರದವರು ನೇರವಾಗಿ ಗುರುತಿಸುತ್ತಿರುವುದು ಇದಕ್ಕೆ ಸಾಕ್ಷಿಯಾಗಿದೆ, ಸಾವಳಗಿಯ ದಲಿತ ಕುಟುಂಬದ ವಿಜಯಪುರದ ನಿವಾಸಿ ಅರ್ಜುನ ಅವರ ಈ ಸಾಧನೆ ಶ್ಲಾಘನೀಯವಾಗಿದೆ.ದೇಶ ತಿರುಗು ಕೋಶ ಓದು ಎಂಬ ಗಾದೆಯಂತೆ ನಮ್ಮ ಇಂದಿನ ಯುವ ಪೀಳಿಗೆ ದೇಶ ತಿರುಗಿ ಭಾರತದ ಪ್ರತಿಭೆಯನ್ನು ವಿಶ್ವದಾದ್ಯಂತ ಮೆರೆಸುತ್ತಿರುವುದು ಹೆಮ್ಮೆಯ ಸಂಗತಿ. ನಮ್ಮ ದೇಶದ ಪ್ರತಿಭೆಗಳನ್ನು ಗುರುತಿಸುವ ಕೆಲಸ ಇನ್ನೂ ಹೆಚ್ಚಾಗಬೇಕು ಎಂದು ಅಭಿಪ್ರಾಯ ಪಟ್ಟರು.

ಶಿಕ್ಷಕಿ ಗಿರಿಜಾ ಅವರು ಮಾತನಾಡಿ, ಹಿಂದೂಸ್ಥಾನವು ಎಂದೂ ಮರೆಯದ ಭಾರತ ರತ್ನವು ನೀನಾಗು ಎಂಬಂತೆ ಯುವ ಶಕ್ತಿ ಎಲ್ಲಿದ್ದರೂ ಬಲಿಷ್ಠ ಭಾರತಕ್ಕೆ ಶಕ್ತಿಯಾಗಿ ಭಾರತೀಯ ಸಂಸ್ಕೃತಿ ಮರೆಯಬಾರದು,ನಮ್ಮ ನಾಡು,ನುಡಿ,ಭಾವ ಸದಾ ನೆನಪಿಡಬೇಕು ಎಂದರು.

ಅಖಿಲೇಶ ಮೇಲಿನಕೇರಿ ಅವರು ಮಾತನಾಡಿ, ಭಾರತದ ಭಾತೃತ್ವ, ಸಂಸ್ಕಾರ ಮರೆಯದೇ ಬಸವಣ್ಣನವರು ಹೇಳಿದಂತೆ ಕಾಯಕವೇ ಕೈಲಾಸ ಸಿದ್ಧಾಂತ ಪಾಲಿಸಿ ದೇಶದ ಕೀರ್ತಿ ತರಲು ಯುವ ಶಕ್ತಿ ಮುಂದಾಗಬೇಕಿದೆ ಎಂದು ನುಡಿದರು.

ಸನ್ಮಾನ ಸ್ವೀಕರಿಸಿದ ಅರ್ಜುನ ಮೇಲಿನಕೇರಿ ಅವರು ಮಾತನಾಡಿ, ನಾನು ಎಲ್ಲೇ ಇದ್ದರೂ ನಮ್ಮ ಸಂಸ್ಕಾರ,ತತ್ವ,ನೀತಿ,ಭಾವೈಕ್ಯತೆ ಎಂದೂ ಮರೆಯಲ್ಲ,ದೇಶದ ,ಊರಿನ ಹೆಸರು ,ಕೀರ್ತಿ ತರುವ ಕಾಯಕ ಮಾಡುತ್ತೇನೆ ಎಂದರು.

ಶಿಕ್ಷಕಿ ರಮಾಬಾಯಿ ಬಾಬುರಾವ ರಾಯಣ್ಣವರ ಅವರು ಮಾತನಾಡಿ, ಸೂರ್ಯನೇ ಮಕರ ವೃತ್ತವನ್ನು ಮುಟ್ಟಿ ಕರ್ಕ ವೃತ್ತದ ಕಡೆಗೆ ತಿರುಗುತ್ತಿರುವಾಗ ಭಾರತದ ಪ್ರತಿಭೆಗಳು ವಿಶ್ವದಾದ್ಯಂತ ತಿರುಗುತ್ತಿರುವುದು ಹೆಮ್ಮೆಯ ವಿಷಯವಾಗಿದೆ, ಎಲ್ಲೇ ಇದ್ದರೂ ಭಾರತೀಯರು ಸ್ವಾಭಿಮಾನಿಗಳು ಎಂದರು.

ರಚನಾ ಅರ್ಜುನ ಮೇಲಿನಕೇರಿ, ಲತಾ ಬಾಣಿಕೋಲ, ಮೇಘ, ಚೇತನ, ದೀಪಾ, ಬಸವಂತಪ್ಪ, ಸುನೀತಾ ಈಟಿ, ಭಾಗ್ಯ ರಾಯಣ್ಣವರ, ಅನು, ಚೇತನ,ವಿವಿಧ ಕವಿಗಳು ಕಾವ್ಯದ ಮೂಲಕ ಬೀಳ್ಕೊಟ್ಟದ್ದು ವಿಶೇಷವಾಗಿತ್ತು.

ಸನ್ಮಾನಿತ ಅರ್ಜುನ ತಂದೆ ಭೀಮರಾಯ ತಾಯಿ ವಿಜಯಲಕ್ಷ್ಮಿ ಮೇಲಿನಕೇರಿ ವೇದಿಕೆಯ ಮೇಲಿದ್ದರು.

ಉಪನ್ಯಾಸಕಿ ಸುಧಾ ವಂದಿಸಿದರು.

# ಶಿಕ್ಷಕ ಸಂತೋಷ ಬಂಡೆಗೆ ರಾಜ್ಯ ಪ್ರಶಸ್ತಿ ಪ್ರದಾನ



**ವಿಜಯಪುರ** : ಬೆಂಗಳೂರಿನ ಕರ್ನಾಟಕ ಜ್ಞಾನ ವಿಜ್ಞಾನ ಸಮಿತಿ, ಜಿಲ್ಲಾ ಘಟಕದ ವತಿಯಿಂದ ವಿಜಯಪುರದ ಎಕ್ಸ್ ಲಂಟ್ ವಿಜ್ಞಾನ ಪದವಿಪೂರ್ವ ಕಾಲೇಜಿನಲ್ಲಿ ರವಿವಾರದಂದು ಹಮ್ಮಿಕೊಂಡ ಸಾವಿತ್ರಿಬಾಯಿ ಫುಲೆ ಜನ್ಮ ದಿನಾಚರಣೆ ಹಾಗೂ ಜಿಲ್ಲಾ ಶೈಕ್ಷಣಿಕ ಸಮ್ಮೇಳನದಲ್ಲಿ ಇಂಡಿ ತಾಲೂಕಿನ ಹಿರೇರೂಗಿ ಗ್ರಾಮದ ಯುಬಿಎಸ್ ಶಾಲೆಯ ಇಂಗ್ಲೀಷ್ ಶಿಕ್ಷಕ ಸಂತೋಷ ಬಂಡೆ ಅವರಿಗೆ 'ಜ್ಯೋತಿಬಾ ಫುಲೆ ರಾಜ್ಯ ಆದರ್ಶ ಶಿಕ್ಷಕ ಪ್ರಶಸ್ತಿ'ಯನ್ನು ಪ್ರದಾನ ಮಾಡಲಾಯಿತು.

ಈ ಸಂದರ್ಭದಲ್ಲಿ ಜಿಲ್ಲಾಧ್ಯಕ್ಷ ಜಿ ಎಸ್ ಕಾಂಬಳೆ, ಗೌರವಾಧ್ಯಕ್ಷ ಪ್ರಭುಗೌಡ ಪಾಟೀಲ, ಶಿವಾನಂದ ಕಲ್ಯಾಣಿ, ಅನ್ನಪೂರ್ಣ ಬೆಳ್ಳೆನ್ನವರ, ಬಿ.ಎಚ್. ನಾಡಗೀರ, ಡಾ. ಸಿದ್ದಣ್ಣ ಬಾಡಗಿ, ಕಲ್ಲಪ್ಪ ತೊರವಿ, ಬಸವರಾಜ ಪೂಜಾರ, ಸಂಜಯ ನಡುವಿನಮನಿ, ಡಾ. ನಂದಾ ತಿಕೋಟಿ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.

# ಗ್ಯಾರಂಟಿ ಯೋಜನೆಗಳ ನೂತನ ಕಾರ್ಯಾಲಯ ಉದ್ಘಾಟನೆ

**ಆಲಮೇಲ** : ಪಟ್ಟಣದ ಯು.ಕೆ.ಪಿ. ಹನುಮ ದೇವರ ಮೈದಾನದಲ್ಲಿ ತಾಲೂಕ ಮಟ್ಟದ ಗ್ಯಾರಂಟಿ ಯೋಜನೆಗಳ ನೂತನ ಕಾರ್ಯಾಲಯವನ್ನು ಶಾಸಕ ಅಶೋಕ ಮನುಗೂಳಿ ಉದ್ಘಾಟಿಸಿ ಕಾರ್ಯಾರಂಭಕ್ಕೆ ಚಾಲನೆ ನೀಡಿದರು.



ಆಲಮೇಲ ತಾಲೂಕಿನ ಗ್ಯಾರಂಟಿ ಯೋಜನೆ ಅನುಷ್ಠಾನ ಸಮಿತಿಯ ಸರ್ಕಾರದ ನಾಮ ನಿರ್ದೇಶಕ 14 ಜನ ಪದಾಧಿಕಾರಿಗಳನ್ನು ನೇಮಿಸಿ ಈ ಸಮಿತಿಯ ನೂತನ ಗ್ಯಾರಂಟಿ ಯೋಜನೆಯ ಅಧ್ಯಕ್ಷ ಅಶೋಕ ಕೊಳಾರಿ ಹಾಗೂ ಪದಾಧಿಕಾರಿಗಳಿಗೆ ಸನ್ಮಾನಿಸಿ, ಗೌರವಿಸಿ, ಸರ್ಕಾರದ ಯೋಜನೆಗಳಾದ 5 ಗ್ಯಾರಂಟಿ ಯೋಜನೆಗಳಾದ ಗೃಹಲಕ್ಷೀ, ಶಕ್ತಿ, ಅನ್ನಭಾಗ್ಯ, ಗೃಹ ಜ್ಯೋತಿ ಹಾಗೂ ಯುವ ನಿಧಿ ಗಳನ್ನು ತಾಲೂಕಿನ ಜನರಲ್ಲಿ ಜಾಗ್ರತೆಯ ಮೂಲಕ ಈ ಯೋಜನೆಗಳಲ್ಲಿನ ಪಲಾನುಭವಿಗಳಿಗೆ ಯೋಜನೆಗಳನ್ನು ಮುಟ್ಟಿಸುವ ಕಾರ್ಯಗಳು, ಪ್ರಗತಿಯಲ್ಲಿ ಸಾಗಿ ಸರ್ಕಾರದ ಕೈ ಬಲಪಡಿಸಲು ನೀವೆಲ್ಲರೂ ಶ್ರಮಿಸಬೇಕೆಂದು ಹೇಳಿದರು.

ವಿಜಯಪುರ ಜಿಲ್ಲಾ ಗ್ಯಾರಂಟಿ ಯೋಜನೆಗಳ ಅಧ್ಯಕ್ಷರಾದ ಇಲಿಯಾಸ್ ಬೋರಾಮಣಿಯವರು ಸರ್ಕಾರದ 5 ಗ್ಯಾರಂಟಿ ಯೋಜನೆಗಳನ್ನು ಇಡಿ ಜಿಲ್ಲೆಯ ಜನರಿಗೆ ಮುಟ್ಟಿಸುವಂತಹ ಕೆಲಸ ನಮ್ಮ ಗ್ಯಾರಂಟಿ ಸಮಿತಿಯಿಂದ ಪ್ರತಿಯೊಂದು ಗ್ರಾಮ ಮಟ್ಟದಲ್ಲಿ ಸಭೆ ಮಾಡಿ ಜನರಿಗೆ ಸರ್ಕಾರದ ಒಂದು ಯೋಜನೆಗಳು ಪ್ರತಿಯೊಬ್ಬರಿಗೂ ಸೌಲಭ್ಯಗಳು ಸಿಗುವಂತೆ ನಾವೆಲ್ಲರೂ ಕಾರ್ಯನಿರ್ವಹಿಸೋಣ ಶಾಸಕರಿಗೆ ಹೆಗಲಿಗೆ ಹೆಗಲುಕೊಟ್ಟು ಕ್ಷೇತ್ರದ ಪ್ರಗತಿಯ ಸಾಧಿಸೋಣ ಎಂದರು.

ತಾಲೂಕಿನ ಅಧಿಕಾರಿಗಳು ಕಾರ್ಯ ನಿರ್ವಾಹಣಾಧಿಕಾರಿ ಫರೀದಾಪಠಾಣ, ಚಂದ್ರಕಾಂತ ನಾಯಕ , ಶಂಭುಲಿಂಗ ಹಿರೇಮಠ, ಎಂ.ಪಿ.ಬಿಸ್ಸೆ, ಬಸವರಾಜ ಬೋವಿ, ಪ.ಪಂ. ಅಧ್ಯಕ್ಷ ಸಾಧಿಕ್ ಸುಂಬಡ, ಹಿರಿಯರಾದ ಸಂಗನಗೌಡ ಬಮ್ಮನಹಳ್ಳಿ, ಹಿರಿಯರಾದ ರಮೇಶ ಭಂಟನೂರ,

ಸಿದ್ದಾರಾಮ ಕೊಳಾರಿ ಅನೇಕ ಅಧಿಕಾರಿಗಳು, ಪಕ್ಷಾತೀತವಾಗಿ ಅನೇಕ ಗಣ್ಯರು ಇದ್ದರು. ಕಾರ್ಯಕ್ರಮ ನಿರೂಪಣೆ ಕ.ಸಾ.ಪ ಅಧ್ಯಕ್ಷ ಶಿವಶರಣ ಗುಂದಗಿ, ಹಾಗೂ ಶ್ರೀ ಶೈಲ ಮಠಪತಿ ನಿರ್ವಹಿಸಿದರು.

# ವಿಕಲಚೇತನರಿಗೆ ಅನುಕಂಪ ಬೇಡ, ಅವಕಾಶ ಬೇಕು: ಫಾದರ್ ಟಿಯೋಲ್ ಮಚಾದೋ



**ವಿಜಯಪುರ** : ವಿಕಲಚೇತನರಿಗೆ ಅನುಕಂಪ ಬೇಡ. ಅವರಿಗೆ ಅವಕಾಶ ಬೇಕು. ಅವಕಾಶ ಸಿಕ್ಕರೆ ಅವರು ಎಲ್ಲರಿಗಿಂತಲೂ ಹೆಚ್ಚು ಉತ್ತಮ ರೀತಿಯಲ್ಲಿ ಬದುಕು ಕಟ್ಟಿಕೊಳ್ಳಲು ಸಮರ್ಥರಿದ್ದಾರೆ ಎಂದು ಫಾದರ್ ಟಿಯೋಲ್ ಮಚಾದೋ ಹೇಳಿದರು.

ಇಲ್ಲಿನ ಅನೌಪಚಾರಿಕ ಶಿಕ್ಷಣ ಸಂಸ್ಥೆ, ವಿಶೇಷ ಚೇತನರ ಬೆಂಬಲ ಕಾರ್ಯಕ್ರಮ, ವಿಜಯಪುರ ಹಾಗೂ ಕುಷ್ಠರೋಗ ಬೆಂಬಲ ಕಾರ್ಯಕ್ರಮ, ವಿಜಯಪುರ ಇವರ ಸಹಯೋಗದಲ್ಲಿ ವಿಶ್ವ ವಿಶೇಷ ಚೇತನರ ದಿನಾಚರಣೆ ಹಾಗೂ ವಿಶ್ವ ಕುಷ್ಠರೋಗ ನಿರ್ಮೂಲನಾ ದಿನಾಚರಣೆ ಅಂಗವಾಗಿ ನಗರದ ಸಂತ ಅನ್ನಮ್ಮನವರ ದೇವಾಲಯದ ಸಭಾಂಗಣದಲ್ಲಿ ಆಯೋಜಿಸಿದ ವಿಶೇಷ ಚೇತನರಿಗೆ ಅಗತ್ಯ ಸಲಕರಣೆಗಳ ವಿತರಣೆ ಕಾರ್ಯಕ್ರಮವನ್ನು ಉದ್ದೇಶಿಸಿ ಅವರು ಮಾತನಾಡಿದರು.

ಈಗಾಗಲೇ ಅನೌಪಚಾರಿಕ ಶಿಕ್ಷಣ ಸಂಸ್ಥೆ ಆರೋಗ್ಯದ ಕುರಿತು ಹಲವಾರು ರೀತಿಯಾಗಿ ಕೆಲಸ ಕಾರ್ಯಗಳನ್ನು ಮಾಡುತ್ತಿದೆ. ಅದರಲ್ಲಿ ವಿಶೇಷಚೇತನರಿಗೆ ಮತ್ತು ಕುಷ್ಠರೋಗ ನಿರ್ಮೂಲನೆ ಮಾಡುವ ಸಲುವಾಗಿ ಸರ್ಕಾರದ ಜೊತೆ ಕೆಲಸ ಮಾಡುತ್ತಿದೆ. ಕುಷ್ಟರೋಗ ಎನ್ನುವುದು ಸಮಾಜದಲ್ಲಿ ಕಳಂಕ ಮತ್ತು ಅವರನ್ನು ಮುಟ್ಟಿಸಿಕೊಳ್ಳಬಾರದೆಂಬ ಮೂಢನಂಬಿಕೆ ಜನರಲ್ಲಿ ಹಾಸು ಹೊಕ್ಕಾಗಿದೆ. ಇದರ ವಿರುದ್ಧ ನಮ್ಮ ಸಂಸ್ಥೆಯು ನಿರಂತರವಾಗಿ ಕಾರ್ಯಕ್ರಮಗಳು ಚಟುವಟಿಕೆಗಳನ್ನು ಮಾಡುತ್ತಿದೆ?. ಕುಷ್ಠರೋಗ ಭಾದಿತರ ಮತ್ತು ವಿಶೇಷ ಚೇತನರ ಜೊತೆ ನಾವಿದ್ದೇವೆ ಎಂದು ಹೇಳಿದರು.

ನಮ್ಮ ಸಂಸ್ಥೆ ಪ್ರತಿ ತಿಂಗಳು ಬೆಂಬಲ ಸಭೆಗಳನ್ನು ಮಾಡುತ್ತೇವೆ. ನಿಮ್ಮ ಇಚ್ಛಾಶಕ್ತಿ ಇದ್ದರೆ ಏನೆಲ್ಲಾ ಮಾಡಬಹುದು ಎಂಬುದಕ್ಕೆ ನಿಮ್ಮಲಿರುವ ಜನಗಳೇ ಮಾದರಿ. ನಿಮ್ಮಗೆ ಅನುಕಂಪಕ್ಕಿಂತಲೂ ಅವಕಾಶದ ಅಗತ್ಯತೆ ಬೇಕು ಎಂದು ತಿಳಿಸಿದರು.

ಸಿಂದಗಿಯ ಸಂಗಮ ಸಂಸ್ಥೆಯ ಫಾದರ್ ಸಂತೋಷ ಅವರು ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ, ವಿಶೇಷಚೇತನರು ಅಬಲರಲ್ಲ. ಎಲ್ಲ ವಿಧದಲ್ಲಿ ಸಬಲರು. ನಿಮ್ಮಲಿರುವ ಕಲೆ ತುಂಬಾ ವಿಶಿಷ್ಟವಾಗಿದ್ದು ಅವುಗಳನ್ನು ಕಂಡುಕೊಳ್ಳಿ. ನಿಮ್ಮ ಜೀವನದಲ್ಲಿ ದೊಡ್ಡದಾದ ಸಾಧನೆಗಳನ್ನು ಮಾಡಲು ಸಾಧ್ಯವಾಗುತ್ತದೆ ಎಂದು ಹೇಳಿದರು.

ವಿಕಲಚೇತನ ಹಾಗೂ ಹಿರಿಯ ನಾಗರಿಕ ಸಬಲೀಕರಣ ಇಲಾಖೆ ಜಿಲ್ಲಾ ಅಧಿಕಾರಿ ಸವಿತಾ ಕಾಳೆ ಮುಖ್ಯ ಅತಿಥಿಗಳಾಗಿ ಮಾತನಾಡಿ, ವಿಕಲಚೇತನರು ಮತ್ತು ಕುಷ್ಠರೋಗಿಗಳ ಸಲುವಾಗಿ ಅನೌಪಚಾರಿಕ ಶಿಕ್ಷಣ ಸಂಸ್ಥೆ ಸರ್ಕಾರದ ಜೊತೆಗೂಡಿ ಕೆಲಸ ಮಾಡುತ್ತಿರುವುದು ತುಂಬಾ ಸಂತೋಷದಾಯಕವಾಗಿದೆ. ಈ ಸಂಸ್ಥೆಯು ಸರ್ಕಾರದ ಯಾವುದೇ ಯೋಜನೆ ಇಲ್ಲದೇ ತಮ್ಮ ಸ್ವಂತ ಖರ್ಚು ಹಾಕಿ ಎಲ್ಲರಿಗೂ ಸಹಾಯ ಸಹಕಾರ ಮಾಡುತ್ತಿರುವುದು ನಿಮ್ಮ ಅದೃಷ್ಟ. ನಾವು ನಮ್ಮ ಇಲಾಖೆಯಿಂದ ಏನು ಸಹಾಯ ಮಾಡಬೇಕು. ಅದನ್ನು ಮಾಡಲು ಸಿದ್ಧರಿದ್ದೇವೆ ಎಂದರು. ಜಿಲ್ಲಾ ಕುಷ್ಠರೋಗ ನಿವಾರಣ ಕಾರ್ಯಕ್ರಮಾಧಿಕಾರಿ ಡಾ. ಅರ್ಚನಾ ಕುಲರ್ಕಣಿ ಅತಿಥಿಗಳಾಗಿ ಮಾತನಾಡಿದರು.

ಅನೌಪಚಾರಿಕ ಶಿಕ್ಷಣ ಸಂಸ್ಥೆಯ ಸಹ ನಿರ್ದೇಶಕ ಫಾದರ್ ಸುಮನ್ ಬಾಲು ಅವರು ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಈ ಕಾರ್ಯಕ್ರಮದಲ್ಲಿ ವಿಕಲಚೇತನ ಮತ್ತು ಕುಷ್ಠರೋಗ ಭಾದಿತರು ಹಲವಾರು ಸ್ಪರ್ಧೆಗಳನ್ನು ಆಡಿ ಬಹುಮಾನವನ್ನು ತೆಗೆದುಕೊಂಡರು. ಕುಷ್ಠರೋಗ ನಿವಾರಣ ಸಂಸ್ಥೆಯಿಂದ ಕುಷ್ಠರೋಗ ಭಾದಿತರಿಗೆ ಪಾದರಕ್ಷೆಗಳನ್ನು ನೀಡಿದ್ದರು. ಅನೌಪಚಾರಿಕ ಶಿಕ್ಷಣ ಸಂಸ್ಥೆ ಮತ್ತು ವಿಕಲಚೇತನ ಹಾಗೂ ಹಿರಿಯ ನಾಗರಿಕ ಸಬಲೀಕರಣ ಇಲಾಖೆಯಿಂದ ವಿಕಲಚೇತನರಿಗೆ ಅಗತ್ಯವಿರುವ ಸಲಕರಣೆಗಳನ್ನು ವಿತರಣೆ ಮಾಡಲಾಯಿತು ಮತ್ತು ಅನೌಪಚಾರಿಕ ಶಿಕ್ಷಣ ಸಂಸ್ಥೆಯಿಂದ ಎಲ್ಲರಿಗೂ ಪ್ರೋಟಿನ್ ಪೌಡರ್ ಮತ್ತು ವಿಟಮಿನ್ ಔಷಧಿಯನ್ನು ನೀಡಲಾಯಿತು.

ಸುನಿತಾ ಮೋರೆ ಸ್ವಾಗತಿಸಿದರು ಮೀನಾಕ್ಷಿ ಸಿಂಗೆ ನಿರೂಪಿಸಿದರು. ಸಂವಿಧಾನ ಪೀಠಿಕೆ ಶೃತಿ ನೀಡೋಣಿ ವಂದಿಸಿದರು.

# ಮಹಾ ಪುರುಷರನ್ನು ಸ್ಮರಿಸುವುದು ನಮ್ಮೆಲ್ಲರ ಕರ್ತವ್ಯ: ಶಾಸಕ ಯತ್ನಾಳ

**ವಿಜಯಪುರ** : ಸಮಾಜದಲ್ಲಿರುವಂತಹ ಲೋಪದೋಷಗಳನ್ನು ಸರಿಪಡಿಸುವ ಸಲುವಾಗಿ ಕವಿತೆ ಹಾಗೂ ವಚನಗಳ ಮೂಲಕ ಅವರ ವಿಚಾರಧಾರೆಗಳನ್ನು ಸಮಾಜಕ್ಕೆ ಕೊಟ್ಟಂತಹ ಅನೇಕ ಮಹಾ ಪುರುಷರುಗಳನ್ನು ಸ್ಮರಿಸುವುದು ನಮ್ಮ ನಿಮ್ಮೆಲ್ಲರ ಕರ್ತವ್ಯ ಎಂದು ನಗರ ಶಾಸಕ ಬಸನಗೌಡ ಪಾಟೀಲ (ಯತ್ನಾಳ) ಹೇಳಿದರು.



ಭಾನುವಾರ ನಗರದ ಕಂದಗಲ್ಲ ಶ್ರೀ ಹನಮಂತರಾಯ ರಂಗಮಂದಿರಲ್ಲಿ ಜಿಲ್ಲಾಡಳಿತ, ಜಿಲ್ಲಾ ಪಂಚಾಯತಿ, ಮತ್ತು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವತಿಯಿಂದ ಮಹಾಯೋಗಿ ವೇಮನ ಜಯಂತಿ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಸಮಾಜದಲ್ಲಿ ಜಾತಿಗಳನ್ನು ಮೀರಿ ಸಮಾಜದಲ್ಲಿ ಬದಲಾವಣೆಯನ್ನು ಮಾಡಿ, ಕ್ರಾಂತಿ ಮಾಡಿದಂತಹ ಸತ್ಪುರುಷರಾದ ನಮ್ಮ ಮಹಾಯೋಗಿ ವೇಮನರು ಹದಿನೈದನೇ ಶತಮಾನದಲ್ಲಿ ಸಮಾಜದ ಅಂಕುಡೊಂಕುಗಳನ್ನು ತಿದ್ದಿ ಸಮಾಜವನ್ನು ಸರಿದಾರಿಗೆ ತರಲು ವಚನಗಳ ಮೂಲಕ ಅವರ ವಿಚಾರಧಾರೆ ಇಂದು ನಮಗೆ ದಾರಿದೀಪವಾಗಿವೆ ಎಂದರು.

ಸುಮಾರು 15 ಸಾವಿರ ಪದ್ಯಗಳನ್ನು ಬರೆದು ಸಮಾಜಕ್ಕೆಒಂದು ಒಳ್ಳೆಯ ಕೊಡುಗೆಯನ್ನು ನಮಗೆ ನೀಡಿದ್ದಾರೆ. ಮಹಾಯೋಗಿಯ ಜೀವನ ಸಂದೇಶ ಎಲ್ಲರಿಗೂ ಪ್ರೇರಣೆಯಾಗಲಿ. ಮಹನೀಯರ ಸಾರಿದ ತತ್ವಸಿದ್ಧಾಂತಗಳನ್ನುಅರ್ಥ ಮಾಡಿಕೊಂಡು ಅವರು ಹಾಕಿಕೊಟ್ಟ ಮಾರ್ಗದಲ್ಲಿ ಎಲ್ಲರೂ ನಡೆಯಬೇಕು. ಹುಟ್ಟಿನಿಂದಲೇ ಎಲ್ಲರೂ ಸಮಾನರು ಎಂದು ಸಾರಿದ ವೇಮನರ ಬದುಕು ನಮಗೆ ಸ್ಪೂರ್ತಿಯಾಗಬೇಕು ಎಂದು ಹೇಳಿದರು.

ನಮ್ಮ ದೇಶ ಸಿರಿ ಸಂಪತ್ತನ್ನು ಹೊಂದಿದ ದೇಶ ಅದರೊಂದಿಗ ಹೃದಯ ಸಂಪತ್ತನ್ನು ಹೊಂದಿದೆ. ಡಾ. ಅಂಬೇಡ್ಕರ ಅವರು ದೇಶದಲ್ಲಿ ಅಶ್ಪೃಶ್ಯತೆ ಕುರಿತು ತಮ್ಮ ಜೀವನದ ಉದ್ದಕ್ಕೂ ಹೋರಾಡಿ ಎಲ್ಲರೂ ಒಂದೇ ಎಂದು ಜಗತ್ತಿಗೆ ಸಾರಿ ಸಾರಿ ಹೇಳಿದ ಮಹಾನ ನಾಯಕರಾಗಿದ್ದರು. ಇಂತಹ ಮಹನೀಯರ ಆದರ್ಶಗಳನ್ನು ನಮ್ಮ ಜೀವನದಲ್ಲಿ ಅಳವಡಿಸಿಕೊಳ್ಳುವಂತೆ ಅವರು ತಿಳಿಸಿದರು. ಕರ್ನಾಟಕ ಬಾಲವಿಕಾಸ ಅಕಾಡೆಮಿ ಅಧ್ಯಕ್ಷ ಸಂಗಮೇಶ ಬಬಲೇಶ್ವರ ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿ ಮಾತನಾಡಿ, ಶರಣರ, ಮಹಾಪುರುಷರ, ಸತ್ಪುರುಷರ ಮತ್ತು ದೇಶಕ್ಕಾಗಿ ಬದುಕನ್ನು ಸಮರ್ಪಿಸಿಕೊಂಡವರ ಜಯಂತಿಗಳು ಈ ದೇಶದಲ್ಲಿ ನಾಡಿನಲ್ಲಿ ಸಾಂಕೇತಿಕವಾಗದೆ ಹೃದಯಪೂರಕವಾಗಿ ಆಚರಿಸುವಂತಾಗಬೇಕು. ಅಂದಾಗ ಮಾತ್ರ ಆ ಸಂದೇಶಗಳನ್ನು ಮನೆ ಮನಗಳಲ್ಲಿ ತಲುಪಿಸಲು ಸಾಧ್ಯ. ಎಲ್ಲ ಸಮುದಾಯದವರು ದೇವಾಲಯಗಳನ್ನು ಮಾತ್ರ ಕಟ್ಟದೆ ಧಾರ್ಮಿಕ ಭಾವನೆಗಳ ಜೊತೆಗೆ ಜೀವಂತ ದೇವಾಲಯವಾದ ಶಿಕ್ಷಣ ಸಂಸ್ಥೆಗಳನ್ನು ಕಟ್ಟಿದಲ್ಲಿ ಎಲ್ಲ ಸಮುದಾಯದ ನಿಜವಾದ ದೇವರುಗಳು ಎಲ್ಲ ಮಕ್ಕಳು ಓದಲಿಕ್ಕೆ ಸಾಧ್ಯ. ವೇಮನ ವಚನಗಳನ್ನು ಇಡೀ ರಾಜ್ಯಕ್ಕೆ ಪರಿಚಯಿಸಿದ ಹಾಗೂ ಅನುವಾದಿಸಿದ ಸಾಕಷ್ಟು ಸಮಯ ತೆಗೆದುಕೊಂಡ ದಿ.ಎಸ್.ಆರ್ ಪಾಟೀಲ ಹಾಗೂ ದಿ. ಕೆ.ಎಚ್ ಪಾಟೀಲ ಅವರು ವೇಮನರ ಕುರಿತು ಅಧ್ಯಯನ ಹಾಗೂ ಸಂಶೋಧನೆ ಮಾಡಿ ಜನವರಿ 19 ಕ್ಕೆ ವೇಮನ ಜಯಂತಿ ಆಚರಿಸುವಂತೆ ಐತಿಹಾಸಿಕ ನಿರ್ಧಾರ ತೆಗೆದುಕೊಂಡು ಕಳೆದ 5 ವರ್ಷಗಳಿಂದ ಸರ್ಕಾರಿ ಜಯಂತಿಯಾಗಿ ಆಚರಿಸಲು ಕ್ರಮ ವಹಿಸಲಾಗುತ್ತಿದೆ. ಅವರನ್ನು ಇಂತಹ ಸಂದರ್ಭದಲ್ಲಿ ನಾವು ಸ್ಮರಿಸಬೇಕು ಎಂದು ಅವರು ಹೇಳಿದರು.

ಅಪರ ಜಿಲ್ಲಾಧಿಕಾರಿ ಸೋಮಲಿಂಗ ಗೆಣ್ಣೂರ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿ, ಮಹಾ ಯೋಗಿ ವೇಮನರು ಮೂಢನಂಬಿಕೆ, ಡಂಬಾಚಾರವನ್ನು ಸಮಾಜದಿಂದ ಕಿತ್ತೊಗೆದು, ಮೇಲು ಕೀಳು ಎನ್ನುವುದನ್ನು ಹೊಡೆದೋಡಿಸಿದ ಮಹಾನ ಯೋಗಿ ವೇಮನರು ಸಮ ಸಮಾಜವನ್ನು ಸುಧಾರಿಸುವ ನಿಟ್ಟಿನಲ್ಲಿ ಚರಿತ್ರೆಗಳನ್ನು ಬರೆದವರು. ವೇಮನರು ನಮ್ಮ ದೇಶದ ಮಹಾನ ಸಾಕ್ರಟಿಸ್ ಆಗಿದ್ದರು. ಅವರು ಹಾಕಿಕೊಟ್ಟ ಆದರ್ಶ ಹಾಗೂ ಮಾರ್ಗದರ್ಶನಗಳನ್ನು ಮುಂದಿನ ಪೀಳಿಗೆಗೆ ತಿಳಿ ಹೇಳಬೇಕು ಎಂದು ಅವರು ಹೇಳಿದರು.

ಸಾಹಿತಿಗಳಾದ ಶಿವಶರಣಪ್ಪ ಶಿರೂರು ವಿಶೇಷ ಉಪನ್ಯಾಸ ನೀಡಿದರು. ಹೇಮರಡ್ಡಿ ಶಿಕ್ಷಣ ಸಂಸ್ಥೆಯ ಅಧ್ಯಕ್ಷರಾದ ಸುರೇಶ ದೇಸಾಯಿ ಕಾರ್ಯಕ್ರಮದ ಅತಿಥಿಗಳಾಗಿ ಭಾಗವಹಿಸಿ ಮಾತನಾಡಿದರು.

**ವೇಮನರ ಭಾವಚಿತ್ರ ಮೆರವಣಿಗೆ:**

ಬೆಳಿಗ್ಗೆ ನಗರದ ಶ್ರೀ ಸಿದ್ದೇಶ್ವರ ದೇವಸ್ಥಾನ ಆವರಣದಲ್ಲಿ ನಗರ ಶಾಸಕ ಬಸನಗೌಡ ರಾ.ಪಾಟೀಲ (ಯತ್ನಾಳ) ಮಹಾಯೋಗಿ ವೇಮನರ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿ ಜಾಥಾ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು. ಕಾರ್ಯಕ್ರಮದಲ್ಲಿ ಉಪವಿಭಾಗಾಧಿಕಾರಿ ಗುರುನಾಥ ದಡ್ಡಿ, ತಹಶೀಲ್ದಾರ ಪ್ರಶಾಂತ ಚನಗೊಂಡ ಉಪಸ್ಥಿತರಿದ್ದರು.

ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ಸಂತೋಷ ಭೋವಿ ಸ್ವಾಗತಿಸಿದರು, ಯುವ ಸಬಲೀಕರಣ ಹಾಗೂ ಕ್ರೀಡಾ ಇಲಾಖೆಯ ಸಹಾಯಕ ನಿರ್ದೇಶಕ ರಾಜಶೇಖರ ದೈವಾಡಿ ವಂದಿಸಿದರು. ಎಚ್.ಎ. ಮಮದಾಪುರ ನಿರೂಪಿಸಿದರು.

ಸಮಾಜದ ಮುಖಂಡರುಗಳಾದ ವಿ.ಸಿ ನಾಗಠಾಣ, ಪಾಂಡು ಸಹುಕಾರ ದೊಡಮನಿ, ಬಸನಗೌಡ ಪಾಟೀಲ, ಎಸ್. ಎಚ್ ನಾಡಗೌಡ, ಕಂಠೀರವ ಕುಲ್ಲೊಳ್ಳಿ, ಮಹಾದೇವಿ ತೆಲಗಿ, ಸರೋಜಿನಿ ಚೌಧರಿ, ಸಂಗು ಸಜ್ಜನ, ಭೀಮರಾಯ ಜಿಗಜಿಣಗಿ, ವಿದ್ಯಾವತಿ ಅಂಕಲಗಿ, ದೇವೇಂದ್ರ ಮೀರೇಕರ, ಸೋಮನಗೌಡ ಕಲ್ಲೂರ, ಶಿವಶರಣೆ ಹೇಮರಡ್ಡಿ ಮಲ್ಲಮ್ಮ ಸಂಸ್ಥೆಯ ನಿರ್ದೇಶಕರು, ಸದಸ್ಯರು ಹಾಗೂ ಇತರರು ಉಪಸ್ಥಿತರಿದ್ದರು.

# ಪರಿಶಿಷ್ಟ ಪಂಗಡ ತಳವಾರ ಸಮುದಾಯದ ರೋಸ್ಟರ್ ಶೇ.7 ರಷ್ಟು ಮೀಸಲಾತಿ ಪಾಲನೆಗೆ ಆಗ್ರಹಿಸಿ ಡಿಸಿಗೆ ಮನವಿ ಸಲ್ಲಿಕೆ

**ವಿಜಯಪುರ** : ಜಿಲ್ಲೆಯ ತಳವಾರ ಸಮಾಜ ಸೇವಾ ಸಮಿತಿ (ಟಿ.ಎಸ್. ಎಸ್.) ಸಂಘದ ವತಿಯಿಂದ ಕಲಬುರಗಿ ಉಚ್ಚ ನ್ಯಾಯಾಲಯ ತಡೆಯಾಜ್ಞೆ ಪ್ರಕಾರ ಹಾಗೂ ತಳವಾರ ಎಸ್.ಟಿ. ಸಮುದಾಯಕ್ಕೆ ಸರಕಾರದ ಆದೇಶದ ರೋಸ್ಟರ್ ಅನ್ವಯ ಶೇ.7ರಷ್ಟು ಮೀಸಲಾತಿ ರೋಸ್ಟರ್ ಪಾಲನೆ ಮಾಡುವಂತೆ ಜಿಲ್ಲಾಧಿಕಾರಿಗಳಿಗೆ ಮನವಿ ಸಲ್ಲಿಸಲಾಯಿತು.ಜಿಲ್ಲೆಯಲ್ಲಿ 09/10/2024 ರಂದು ಕಾರ್ಯಕರ್ತ ಹಾಗೂ ಅಡುಗೆ ಸಹಾಯಕ ಹುದ್ದೆಗಳಿಗೆ ಅರ್ಜಿಗಳನ್ನು ಕರೆಯಲಾಗಿದ್ದು, ಈ ಹುದ್ದೆಗಳಿಗೆ



ಅನುಗುಣವಾಗಿ ಸರಕಾರಿ ಆದೇಶದನ್ವಯ ಎಸ್.ಟಿ ವರ್ಗಕ್ಕೆ 100ಕ್ಕೆ ಶೇ.7ರಷ್ಟು ಹುದ್ದೆಗಳು ಹಾಗೂ ಎಸ್.ಸಿ. ವರ್ಗಕ್ಕೆ 100ಕ್ಕೆ ಶೇ.17ರಷ್ಟು ಹುದ್ದೆಗಳು ಮೀಸಲಾತಿ ರೊಸ್ಟರ್ ಅನ್ವಯಿಸುವಂತೆ ಸರಕಾರದ ಸ್ಪಷ್ಟವಾದ ಆದೇಶವಿದ್ದು, ಆದರೆ ಸರಕಾರದ ಆದೇಶವನ್ನು ಪಾಲನೆ ಮಾಡದೇ ಪರಿಶಿಷ್ಟ ಪಂಗಡದ (ಎಸ್‌ಟಿ.) ಸಮುದಾಯಕ್ಕೆ ಶೇ.7 ರಷ್ಟು ಮೀಸಲಾತಿ ನೀಡದೇ ಶೋಷಿತ ಸ'ವ'೧೧ದಾ೦೧'೧ಕ್ಕೆ ಅನ್ಯಾಯ ಮಾಡಿದ್ದರಿಂದ ಕಲಬುರಗಿ ಉಚ್ಚ ನ್ಯಾಯಾಲಯದಿಂದ ತಡೆಯಾಜ್ಞೆಯನ್ನು ತರಲಾಗಿದೆ. ಈ ಜಿಲ್ಲೆಯಲ್ಲಿ ತಳವಾರ ಎಸ್.ಟಿ. ಸಮುದಾಯಕ್ಕೆ ಶೇ.7ರಷ್ಟು ಮೀಸಲಾತಿ ರೋಸ್ಟರ್‌ನ್ನು ಪಾಲನೆ ಮಾಡಿ ತಳವಾರ ಸಮಾಜಕ್ಕೆ ನ್ಯಾಯ ಒದಗಿಸುವಂತೆ ಮನವಿಯಲ್ಲಿ ಕೋರಲಾಗಿದೆ.

ಈ ಸಂದರ್ಭದಲ್ಲಿ ಸಂಘದ ಅಧ್ಯಕ್ಷ ಸೋಮಶೇಖರ ಜಮಾದಾರ, ಉಪಾಧ್ಯಕ್ಷ ಆನಂದ ತಳವಾರ, ಗೌರವಾಧ್ಯಕ್ಷ ಶಿವಶರಣ ನಾಟೀಕಾರ, ಪ್ರಧಾನ ಕಾರ್ಯದರ್ಶಿ ಅಭಿಷೇಕ ಜಮಾದಾರ, ಸಹ ಕಾರ್ಯದರ್ಶಿ ಅಮೋಘಸಿದ್ದ ಮಳಕುಂದಿ, ಮಲ್ಲನಗೌಡ ಪಾಟೀಲ, ಬಾಬು ಕೊಟ್ನೂರ, ಪ್ರಕಾಶ ನಾಯ್ಕೋಡಿ, ಶಶಿ ಪಾಟೀಲ, ರಾಜು ರೋಡಗಿ, ಸಿದ್ದಾರಾಮ ಹತ್ತಳ್ಳಿ, ರವಿ ನಾಟೀಕಾರ ಇತರರು ಉಪಸ್ಥಿತರಿದ್ದರು.

# ಪ್ರಧಾನ ಮಂತ್ರಿ ಸುರಕ್ಷಾ ವಿಮಾ ಯೋಜನೆ ಎಲ್ಲರೂ ಮಾಡಿಸಿ: ಅಪರ ಜಿಲ್ಲಾಧಿಕಾರಿ ಸಿದ್ರಾಮೇಶ್ವರ

**ಕೊಪ್ಪಳ :** ಪ್ರಧಾನ ಮಂತ್ರಿ ಸುರಕ್ಷಾ ವಿಮಾ ಯೋಜನೆ ಹಾಗೂ ಪ್ರಧಾನ ಮಂತ್ರಿ ಜೀವನ ಜ್ಯೋತಿ ವಿಮಾ ಯೋಜನೆಗಳನ್ನು ಸರಕಾರಿ ನೌಕರರು ಕಡ್ಡಾಯವಾಗಿ ಎಲ್ಲರೂ ಮಾಡಿಸಬೇಕೆಂದು ಅಪರ ಜಿಲ್ಲಾಧಿಕಾರಿ ಸಿದ್ರಾಮೇಶ್ವರ ಹೇಳಿದರು.

ಅವರು ಸೋಮವಾರ ಜಿಲ್ಲಾಧಿಕಾರಿಗಳ ಕಛೇರಿ ಸಭಾಂಗಣದಲ್ಲಿ ಪ್ರಧಾನ ಮಂತ್ರಿ ಸುರಕ್ಷಾ ವಿಮಾ ಯೋಜನೆ ಹಾಗೂ ಪ್ರಧಾನ ಮಂತ್ರಿ ಜೀವನ ಜ್ಯೋತಿ ವಿಮಾ ಯೋಜನೆಗಳ ಕುರಿತು ಮಾಹಿತಿ ನೀಡಲು ಅಧಿಕಾರಿಗಳಿಗೆ ಕರೆದ ಸಭೆಯಲ್ಲಿ ಅಧ್ಯಕ್ಷತೆವಹಿಸಿ ಮಾತನಾಡಿದರು.



ಈ ಯೋಜನೆಗಳನ್ನು ನಾನು ಮಾಡಿಕೊಂಡಿದ್ದು ನನ್ನ ಕುಟುಂಬದವರ ಹೆಸರಿನಲ್ಲಿ ಮಾಡಿಸಿದ್ದೇನೆ. ತಾವುಗಳು ಇವುಗಳನ್ನು ಮಾಡಿಕೊಳ್ಳಬೇಕು ಮತ್ತು ತಮ್ಮ ಕಛೇರಿಯಲ್ಲಿರುವ ಸಿಬ್ಬಂದಿಗಳಿಗೂ ಈ ಮಾಹಿತಿ ನೀಡಿ. ಇದು ಸರಕಾರಿ ನೌಕರರು ಮಾತ್ರವಲ್ಲದೆ ಸಾರ್ವಜನಿಕರು ಈ ಪಾಲಿಸಿ ಮಾಡಿಕೊಂಡರೆ ಅವರಿಗೂ ತುಂಬಾ ಅನುಕೂಲವಾಗಲಿದ್ದು. ಸಾಮಾನ್ಯ ಜನರಿಗೆ ಅನುಕೂಲವಾಗುವ ನಿಟ್ಟಿನಲ್ಲಿ ಇದನ್ನು ಜಾರಿಗೆ ತರಲಾಗಿದೆ ಎಂದು ಹೇಳಿದರು.

ಪ್ರಧಾನ ಮಂತ್ರಿ ಸುರಕ್ಷಾ ವಿಮಾ ಯೋಜನೆಗೆ ವಾರ್ಷಿಕ ಕೇವಲ 20 ರೂ ಕಟ್ಟಿದರೆ 2 ಲಕ್ಷ ರೂಗಳ ದುರ್ಘಟನಾ ವಿಮೆ ಸಿಗಲಿದ್ದು 18 ರಿಂದ 70 ವರ್ಷದ ವರೆಗಿನ ಪ್ರಾಯದ ಎಲ್ಲಾ ಸೇವಿಂಗ್ಸ್ ಬ್ಯಾಂಕ್ ಖಾತೆದಾರರು ಈ ಪಾಲಿಸಿ ಮಾಡಬಹುದಾಗಿದೆ. ಪ್ರಧಾನ ಮಂತ್ರಿ ಜೀವನ ಜ್ಯೋತಿ ವಿಮಾ ಯೋಜನೆ ವಾರ್ಷಿಕ ಪ್ರಿಮಿಯಮ್ 436 ಕಟ್ಟಿದರೆ 2 ಲಕ್ಷ ರೂ ಜೀವ ವಿಮೆ 18 ರಿಂದ 50 ವರ್ಷದ ಪ್ರಾಯದ ಎಲ್ಲಾ ಸೇವಿಂಗ್ ಬ್ಯಾಂಕ್ ಖಾತೆದಾರರು ಈ ಪಾಲಿಸಿಗಳನ್ನು ಮಾಡಿಕೊಳ್ಳಬಹುದಾಗಿದೆ ಎಂದು ಹೇಳಿದರು.

ಎಸ್.ಬಿ. ಐ ಬ್ಯಾಂಕಿನ ಎಲ್.ಡಿ.ಎಮ್ ವಿರೇಂದ್ರ ಕುಮಾರ್ ಮಾತನಾಡಿ ನಮ್ಮನ್ನು ನಂಬಿದವರಿಗೆ ಸೆಕ್ಯುರಿಟಿ ಇಟ್ಟು ಸಾಯಬೇಕು ವಿಶೇಷವಾಗಿ ಹಳ್ಳಿಗಾಡಿನ ಜನರಿಗೆ ಈ ಯೋಜನೆಗಳಿಂದ ತುಂಬಾ ಉಪಯೋಗವಾಗಲಿದೆ. ಕಡಿಮೆ ಪ್ರಿಮಿಯಂ ಕಟ್ಟಿದರೆ ಸಾಕು ಇದರ ಲಾಭ ಸಿಗಲಿದೆ. ಇದಕ್ಕೆ ಭಾರತ ದೇಶದ ಎಲ್ಲಾ ನಾಗರಿಕರು ಅರ್ಹರು. ಯಾವುದೇ ಬ್ಯಾಂಕಿನಲ್ಲಿ ತಮ್ಮ ಅಕೌಂಟ್ ಇದ್ದರೆ ಅಟೊ ಡೆಬಿಟ್ ಆಗುತ್ತದೆ. 18 ವರ್ಷ ಮೇಲ್ಪಟ್ಟ ಎಲ್ಲರೂ ಈ ಪಾಲಿಸಿ ಮಾಡಿಕೊಳ್ಳಲು ಹೇಳಬೇಕು ಈ ಕುರಿತು ತಮ್ಮ ಅಕ್ಕಪಕ್ಕದವರಿಗೂ ಮಾಹಿತಿ ನೀಡಿ. ಇದರ ರಾಜ್ಯದ ಗುರಿ 22 ಪ್ರತಿಶತ ಆಗಿದ್ದು ನಮ್ಮ ಜಿಲ್ಲೆಯಲ್ಲಿ 23 ಪ್ರತಿಶತ ಆಗಿದೆ ಬರುವ ದಿನಗಳಲ್ಲಿ ಇನ್ನೂ ಹೆಚ್ಚಿಗೆ ಆಗಬೇಕಿದೆ ಎಂದು ಹೇಳಿದರು.

ಈ ಸಭೆಯಲ್ಲಿ ನಗರಾಭಿವೃದ್ಧಿ ಕೋಶದ ಯೋಜನಾ ನಿರ್ದೇಶಕರಾದ ರೇಷ್ಮಾ ಹಾನಗಲ್, ಜಿಲ್ಲಾ ತರಬೇತಿ ಕೇಂದ್ರದ ಪ್ರಾಂಶುಪಾಲರಾದ ಕೃಷ್ಣಮೂರ್ತಿ ದೇಸಾಯಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕರಾದ ಕೊಟ್ರೇಶ ಮರಬನಳ್ಳಿ, ಪದವಿಪೂರ್ವ ಶಿಕ್ಷಣ ಇಲಾಖೆಯಿಂದ ಉಪನಿರ್ದೇಶಕರಾದ ಜಗದೀಶ, ಪ್ರವಾಸೋದ್ಯಮ ಇಲಾಖೆಯ ಸಹಾಯಕ ನಿರ್ದೇಶಕರಾದ ನಾಗರಾಜ ಸೇರಿದಂತೆ ಜಿಲ್ಲಾ ಮಟ್ಟದ ವಿವಿಧ ಇಲಾಖೆಯ ಅಧಿಕಾರಿಗಳು ಉಪಸ್ಥಿತರಿದ್ದರು.

# ರಕ್ತ ದಾನ ಮಾಡಿ ಜೀವ ಉಳಿಸುವ ಪುಣ್ಯ ಗಳಿಸಿಕೊಳ್ಳಿ: ಉಮಾ ತಂಬ್ರಳ್ಳಿ

**ಕೊಪ್ಪಳ :** ರಕ್ತದಾನ ದಿಂದ ಒಂದು ಜೀವ ಉಳಿಸುವಂತಹ ಪುಣ್ಯ ಸಿಗುತ್ತದೆ ಅದಕ್ಕೆ ಪ್ರತಿಯೊಬ್ಬ ಯುವಕರು ರಕ್ತಧಾನ ಮಾಡಿ ಜೀವ ಉಳಿಸುವಂತಹ ಕೆಲಸ ಮಾಡಿ ಪುಣ್ಯ ಗಳಿಸಿಕೊಳ್ಳಬೇಕೆಂದು ಕೊಪ್ಪಳ ಇನ್ನರ್ ವೀಲ್ ಕ್ಲಬ್ ಅಧ್ಯಕ್ಷರಾದ ಉಮಾ ಮಹೇಶ್ ತಂಬ್ರಳ್ಳಿ ಅಭಿಪ್ರಾಯಪಟ್ಟರು, ಅವರು ನಗರದ ಶ್ರೀ ಗವಿಸಿದ್ದೇಶ್ವರ ಆಯುರ್ವೇದಿಕ್ ಮಹಾವಿದ್ಯಾಲಯ ಆವರಣದಲ್ಲಿ ಕೊಪ್ಪಳ ಇನ್ನರ್ ವೀಲ್ ಕ್ಲಬ್ ಮತ್ತು ರೆಡ್ ಕ್ರಾಸ್ ಸಂಸ್ಥೆ ಇವುಗಳ ಸಯುಕ್ತ ಆಶ್ರಯದಲ್ಲಿ ಏರ್ಪಡಿಸಿದ ರಕ್ತದಾನ ಶಿಬಿರ ದಲ್ಲಿ ಪಾಲ್ಗೊಂಡು ಸರಳ ಸಾಂಕೇತಿಕ ಸಮಾರಂಭದ ಅಧ್ಯಕ್ಷತೆ ವಹಿಸಿ ಮಾತನಾಡಿದರು,



ಮುಂದುವರಿದ ಮಾತನಾಡಿ ಅನ್ನದಾನ ಅಕ್ಷರ ದಾನ ನೇತ್ರದಾನ ದಂತೆಯೆ ರಕ್ತದಾನ ಕೂಡ ಅತ್ಯಂತ ಶ್ರೇಷ್ಠ ದಾನ ವಾಗಿದೆ ಇದರಿಂದ ಒಂದು ಜೀವ ಒಂದು ಕುಟುಂಬ ಉಳಿಸುವಂತಹ ಪುಣ್ಯ ಸಿಗುತ್ತದೆ ಹಾಗಾಗಿ ಪ್ರತಿಯೊಬ್ಬ ಆರೋಗ್ಯವಂತ ಯುವಕರು ರಕ್ತದಾನ ಮಾಡುವುದರ ಮೂಲಕ ಪುಣ್ಯ ಗಳಿಸಿಕೊಳ್ಳಬೇಕು ಮತ್ತು ಒಂದು ಜೀವ ಉಳಿಸಲು ಸಹಕಾರಿ ಯಾಗಬೇಕು ಎಂದ ಅವರು ಇಂದಿನ ರಕ್ತದಾನ ಶಿಬಿರ ದಲ್ಲಿ ನಮ್ಮ ಕ್ಲಬ್ಬಿನ ಪದಾಧಿಕಾರಿಗಳು ಮತ್ತು ಸದಸ್ಯರ ಮಕ್ಕಳು ಸಹ ಭಾಗಿಯಾಗಿ ರಕ್ತದಾನ ನೀಡಲು ಮುಂದೆ ಬಂದಿರುವುದು ನಮ್ಮೆಲ್ಲರಿಗೆ ಹೆಮ್ಮೆ ಮತ್ತು ಸಂತಸ ಉಂಟು ಮಾಡಿದೆ ಎಂದು ಕೊಪ್ಪಳ ಇನ್ನರ್ ವೀಲ್ ಕ್ಲಬ್ ಅಧ್ಯಕ್ಷರಾದ ಉಮಾ ಮಹೇಶ್ ತಂಬ್ರಳ್ಳಿ ಹೇಳಿದರು,

ಈ ಸಂದರ್ಭದಲ್ಲಿ ಪದಾಧಿಕಾರಿಗಳಾದ ಕ್ಲಬ್ಬಿನ ಕಾರ್ಯದರ್ಶಿ ಮೀನಾಕ್ಷಿ ಬಣ್ಣದ ಬಾವಿ ಉಪಾಧ್ಯಕ್ಷರಾದ ಮಧು ಶೆಟ್ಟರ್, ಖಜಾಂಚಿ ಆಶಾ ಕವಲೂರ್, ಐ ಎಸ್ ಓ ಮಧು ನಿಲೋಗಲ್, ಸಂಪಾದಕರಾದ ನಾಗವೇಣಿ ,ಕಾರ್ಯಕಾರಿ ಸಮಿತಿ ಸದಸ್ಯರಾದ ಪಾರ್ವತಿ ಪಾಟೀಲ್, ನಿತಾ ತಂಬ್ರಳ್ಳಿ , ಪದ್ಮ ಜೈನ್, ಮಾಜಿ ಅಧ್ಯಕ್ಷರಾದ ಸುಧಾ ಶೆಟ್ಟರ್ , ಸದಸ್ಯರಾದ ಲತಾ ಉಲ್ಲತಿ ಕವಿತಾ ಶೆಟ್ಟರ್ ಸುವರ್ಣ ಶೆಟ್ಟರ್, ಲತಾ ಪಟ್ಟಣಶೆಟ್ಟಿ ,ಲಕ್ಷ್ಮಿ ಪಾಟೀಲ್, ಪದ್ಮ ವಿಠಲ್ ಸೇರಿದಂತೆ ಅನೇಕರು ಪಾಲ್ಗೊಂಡಿದ್ದರು.

# ವೀಡಿಯೋ ಟ್ರೇಲರ್ ಸಾಂಗ್‌ನೊಂದಿಗೆ ಶ್ರೀಮಠದ ಭಕ್ತರಿಗೆ ಈ ವರ್ಷದ ಜಾತ್ರೆಗೆ ಆಹ್ವಾನ



**ಕೊಪ್ಪಳ :** ಸಂಸ್ಥಾನ ಶ್ರೀ ಗವಿಮಠ ಜಾತ್ರೆಯೂ ಪ್ರತಿ ವರ್ಷ ವಿಭಿನ್ನ, ವಿಶಿಷ್ಟ ರೂಪದಲ್ಲಿ ಅರ್ಥ ಪೂರ್ಣವಾಗಿ ಜರುಗುತ್ತಿದೆ. ಆಧುನಿಕತೆಯ ಸ್ಪರ್ಶದ ಜೊತೆಗೆ 2025 ರ ಮಹಾಜಾತ್ರೆಯ ಜಾತ್ರಾ ಮಹೋತ್ಸವದ ಆಹ್ವಾನ ಶ್ರೀಮಠದ ಭಕ್ತರಿಗೆ ನೇರವಾಗಿ ತಲುಪಿಸುವ ಸತ್ಕಾರ್ಯದಲ್ಲಿ ತೊಡಗಿದೆ. ಅದಕ್ಕೆ ಈ ಬಾರಿಯೂ ಜನೇವರಿ 15, 16 ಹಾಗೂ 17ರಂದು ನಡೆಯುವ ಅಜ್ಜನ ಜಾತ್ರೆಗೆ ಭಕ್ತರನ್ನು ಆಹ್ವಾನಿಸುವ ಆ ದೃಶ್ಯವನ್ನು ಡ್ರೋಣ್ ಕ್ಯಾಮರಾದ ಮೂಲಕ ಸೆರೆಹಿಡಿದ ವೀಡಿಯೊದೊಂದಿಗೆ ಡಿಜಿಟಲ್ ತಂತ್ರಜ್ಞಾನವನ್ನು ಬಳಸಿಕೊಂಡು ತಯಾರಿಸಿದ ಟ್ರೇಲರ್ ಸಾಂಗ್ ನಾಳೆ 02.01.2025 ರ ಸಮಯ ಬೆಳಿಗ್ಗೆ 11:00 ಗಂಟೆಗೆ ಗವಿಮಠದ ಮುಂಭಾಗದಲ್ಲಿ ಸ್ವಚ್ಛತಾ ಸೇವೆಗೈಯುತ್ತಿರುವ ಸೇವಾ ಸಿಬ್ಬಂದಿಗಳಾದ (ಸಫಾಯಿಚಾರಿ)ಲಕ್ಷ್ಮಿ, ನಾಗಮ್ಮ, ಬರಮವ್ವ ಶೋಭಾ, ಲಕ್ಷ್ಮವ್ವ, ಈರಮ್ಮ, ಹುಲಿಗೆಮ್ಮ, ನಾಗಮ್ಮ, ಫಕೀರಮ್ಮ, ಗುಂಡಪ್ಪ, ಮಾತಂಗೆವ್ವಇವರು ಬಿಡುಗಡೆಗೊಳಿಸಿದರು. ಇದರಲ್ಲಿ

**"ಭಕ್ತಿಯ ಮನೆ ಮನಗಳಲ್ಲಿ**
**ಮುಕ್ತಿಯ ಕೆನೆ ನೆನಹಿನಲ್ಲಿ**
**ಓಂಕಾರವು ಕೋಟೆ ಕಟ್ಟಿ**
**ಬೆಟ್ಟಗಳು ಧ್ಯಾನದಲಿ**
**ಸಿದ್ದ ಪುರುಷ ಗವಿಸಿದ್ದನೇ**
**ಇಷ್ಟ ಪ್ರಾಣ ಭಾವದಲ್ಲಿ**
**ಜಾತ್ರೋತ್ಸವ ನಮ್ಮ ಯಾತ್ರೋತ್ಸವ"**

ಎಂಬ ಅಧಮ್ಯ, ಸುಂದರ ಭಕ್ತಿ ತುಂಬಿದ ಸಾಲುಗಳಿರುವ ಈ ಸಾಹಿತ್ಯಕ್ಕೆ ಜೀವ ತುಂಬುವ ಕಂಠಸಿರಿಯ ಕೊಪ್ಪಳದ ಗಾಯಕ ಸದಾಶಿವ ಪಾಟೀಲರು ಮೈದುಂಬಿ ಹಾಡಿರುತ್ತಾರೆ. ಈ ಹಾಡಿನಲ್ಲಿ ಶ್ರೀ ಗವಿಸಿದ್ಧೇಶ್ವರ ಮಹಾರಥೋತ್ಸವದ ವೈಭವದ ದೃಶ್ಯ, ಶ್ರೀ ಶಿವಶಾಂತವೀರ ಹಾಗೂ ಶ್ರೀ ಮರಿಶಾಂತವೀರ ಮಹಾಸ್ವಾಮಿಗಳವರ ಮೂರ್ತಿಶಿಲ್ಪ, ಭಕ್ತಿ ಸಂಗೀತ, ಚಿಕೇನಕೊಪ್ಪದ ಶರಣರ ಧೀರ್ಘದಂಡ ನಮಸ್ಕಾರ, ಜಾತ್ರೆಗೆ ಆಗಮಿಸುವ ಭಕ್ತರ ಪಾದಯಾತ್ರೆ, ಸಾಮಾಜಿಕ ಜಾಗೃತಿ ಜಾಥಾ ಸನ್ನಿವೇಶಒಳಗೊಂಡಿದೆ. ತೆಪ್ಪೋತ್ಸವ, ಜಾತ್ರಾ ಮಹಾದಾಸೋಹದ ಪ್ರಸಾದದ ಸಿದ್ಧತೆ ಮತ್ತು ಭಕ್ತರ ಸೇವನೆ, ಶ್ರೀಮಠದ ಜಾತ್ರೆಯ ಚಿತ್ರಿತ ವೈಶಿಷ್ಟ್ಯಪೂರ್ಣ ಪುಣ್ಯಕಾರ್ಯಗಳು ಇದರಲ್ಲಿ ಅಂತರ್ಗತವಾಗಿವೆ.ನಂದಿಕೋಲು ಕುಣಿತ, ಶ್ರೀ ಸಿದ್ಧೇಶ್ವರ ಮೂರ್ತಿ ಮೆರವಣಿಗೆ ಮತ್ತು ಭಕ್ತಿಯ ಸಿಂಚನದ ಚಿತ್ರ ವಿಡಿಯೋ ಸೊಬಗನ್ನು ಹೆಚ್ಚಿಸಿದೆ.

ಇಲ್ಲಿನ ಪ್ರಾಕೃತಿಕ ಬೆಟ್ಟ-ಗುಡ್ಡಗಳ, ಕೆರೆ, ಸಹಜತೆಯ ವೈಭವ ಮತ್ತಷ್ಟು ವಿಡಿಯೋದ ಆಕರ್ಷಣೆ ಹೆಚ್ಚಿಸಿವೆ.

ವಿದ್ಯಾರ್ಥಿಗಳ ಬಾಳಿಗೆ ಬೆಳಕಾಗಿರುವ ಶ್ರೀ ಗವಿಮಠದ ಉಚಿತವಸತಿ ಹಾಗೂ ಪ್ರಸಾದ ನಿಲಯದ ವಿದ್ಯಾರ್ಥಿಗಳಿಂದ ನುಡಿ ಸೇವೆಗೈಯುವುತ್ತಿರುವದು ಮತ್ತೊಂದು ವೈಶಿಷ್ಟ್ಯತೆಯಾಗಿದೆ. ಈ ಹಾಡನ್ನು ಸುಮಾರು 1500 ವಸತಿ ನಿಲಯದ ವಿದ್ಯಾರ್ಥಿಗಳು ಮತ್ತುಸಾವಿರಾರು ಮೇಣದ ದೀಪಗಳು ಹಾಗೂ ಪೇಪರ ಗ್ಲಾಸುಗಳನ್ನು ಬಳಸಿ ಚಿತ್ರೀಕರಣ ಮಾಡಲಾಗಿರುವ ವೀಡಿಯೋ ಟ್ರೇಲರ್ ಸಾಂಗ್‌ನೊಂದಿಗೆ ಶ್ರೀಮಠದ ಭಕ್ತರಿಗೆ ಈ ವರ್ಷದ ಜಾತ್ರೆಗೆ ಆಹ್ವಾನ ನೀಡಲಾಗಿದೆ.

ಈ ಕೆಳಕಂಡ ಲಿಂಕ್ ಮೂಲಕ ಹಾಡನ್ನು ಡೌನ್ಲೋಡ ಮಾಡಬಹುದು.

https://drive.google.com/file/d/1gW73hGsts1jhPuVKwJKU2Z7C9vC2Hdna/view?usp=drivesdk

# ಶಿಕ್ಷಣ ಕಲಿಸಿದ ಗುರುಗಳಿಗೆ ಗೌರವ ಸಲ್ಲಿಸಿದ: ಕೆವಿವಿವೈಎಸ್ ನಾರಾಯಣ

**ಸೇಡಂ :** ರಾಜಶ್ರೀ ಸಿಮೆಂಟ್ ಕಂಪನಿಯ ಉಪಾಧ್ಯಕ್ಷರು ಲೇಖಕರಾದ ಕೆವಿವಿವೈಎಸ್ ನಾರಾಯಣರವರು 35 ವರ್ಷಗಳ ಹಿಂದೆ ಅವರು ಕಲಿತಿರುವ (ಗಜಪತಿನಗರ) 1984-89ನೇ ಸಾಲಿನಲ್ಲಿ ಆರನೇ ತರಗತಿಯಿಂದ ಹತ್ತನೇ ತರಗತಿ ವರೆಗೆ ಓದಿರುವ ಹಳೆ ವಿದ್ಯಾರ್ಥಿಗಳ ಸಮ್ಮಿಲನದಲ್ಲಿ ಅವರು ಭಾಗವಹಿಸಿ ಕಲಿಸಿದ ಗುರುಗಳಿಗೆ ಗೌರವ ಸನ್ಮಾನ ಸಲ್ಲಿಸಿದ್ದಾರೆ. ಹಳೆ ವಿದ್ಯಾರ್ಥಿ ವಿದ್ಯಾರ್ಥಿನಿಯರೊಂದಿಗೆ ಹಳೆಯ ನೆನಪುಗಳು ಪರಸ್ಪರ ಹಂಚಿಕೊಳ್ಳಲಾಯಿತು ಎಂದು ತಿಳಿಸಿದ್ದಾರೆ.ಅಂದಿನ ಮುಖ್ಯಗುರುಗಳಾದ ಅಲ್ಲು ಅಪ್ಪಲಸ್ವಾಮಿ, ಸಹ ಶಿಕ್ಷಕರಾದ ಮರ್ರಿಪು ವೇಣು, ಕೆ,ಬಿ,ಆರ್ ಆಚಾರ್ಯರು, ಮೃತ್ಯುಂಜಯ ರಾವ್, ಪದ್ಮಾವತಿ, ವರಲಕ್ಷ್ಮಿ, ದೈವಕೃಪ, ಶಿರೋಮಣಿ, ಸಣ್ಯಾಸಿರಾಜು ಅವರನ್ನು ಪ್ರೀತಿಪೂರ್ವಕವಾಗಿ ಆಹ್ವಾನಿಸಿ ಗೌರವ ಸನ್ಮಾನ ಮಾಡಿ ತಮ್ಮ ಗುರುಭಕ್ತಿಯನ್ನು ಸಲ್ಲಿಸಿದ್ದೇವೆ, ಬೇರೆ ರಾಜ್ಯಗಳಿಂದ ಬಂದಿರುವ ಮಧನ್ಮೋಹನ್, ಅಸಿರಾಡ ಪದ್ಮ, ಗುಪ್ತ, ವಿಜಯನಗರಂ ಗಾಯತ್ರಿ ಹಾಸ್ಪಿಟಲ್ ಅಧಿಕಾರಿಗಳಾದ ವಂಶಿ ಪಾವನಿ, ಬೊಂಡಪಲ್ಲಿ ಎಂ,ಇ,ಓ ಅಲ್ಲು ವೆಂಕಟರಮಣ, ವಿವಿಧ ಪ್ರಾಂತಗಳಲ್ಲಿ ಶಿಕ್ಷಕರಾಗಿ ಕಾರ್ಯನಿರ್ವಹಿಸುತ್ತಿರುವ ಅಮುದುಲ ರಮ, ಬೈತಾರು ಶಿವಾಜಿ, ವ್ಯಾಪಾರ ಕ್ಷೇತ್ರದಲ್ಲಿರುವವರು ಈ ಆತ್ಮೀಯ ಸಮ್ಮೇಳನದಲ್ಲಿ ಭಾಗಿಯಾಗಿ ಈ ಮಧುರಾನುಭೂತಿಹೊಂದಿದ್ದರು. ಇನ್ನೂ ಮುಂದೆ ಕೂಡಾ ಇದೆ ರೀತಿ ಪ್ರತಿ ವರ್ಷ ಎಲ್ಲಾ ಕ್ಲಾಸಮೇಟ್ಸ್ ಬೇಟಿಯಾಗಿಬೇಕು, ತಾವು ಓದಿರುವ ಈ ಶಾಲೆಗೆ ತಮ್ಮಿಂದ ಆದಷ್ಟು ಸಹಕಾರ ನೀಡಬೇಕು ಎಂದು ಈ ಸಂದರ್ಭದಲ್ಲಿ ತೀರ್ಮಾನ ಮಾಡಿಕೊಂಡಿದ್ದೇವೆ ಎಂದು ತಿಳಿಸಿದ್ದಾರೆ.

# ಪೀಠಾರೋಹಣ, ಲಿಂಗಪೂಜಾ ಅನುಷ್ಠಾನ ಮಂಗಲ ಇಷ್ಟಲಿಂಗ ಪೂಜೆಯಿಂದ ಆತ್ಮಶುದ್ಧಿ: ಗುರುಮಹಾಂತ ಶ್ರೀ

**ಗುಳೇಗುದಗುಡ್ಡ :** ಮನುಷ್ಯ ತನ್ನ ಆತ್ಮಶುದ್ಧಿಗೆ ಪ್ರತಿದಿನ ತಪ್ಪದೇ ಶಿವಯೋಗ, ಇಷ್ಟಲಿಂಗ ಪೂಜೆ ಮಾಡಿಕೊಳ್ಳುವ ರೂಢಿ ಬೆಳೆಸಿಕೊಳ್ಳಬೇಕು. ಮನುಷ್ಯ ಮನಸ್ಸಿನಿಂದಲೇ ಮಾನವಂತನಾಗುತ್ತಾನೆ. ಮನಸ್ಸಿನಿಂದಲೇ ರಾಕ್ಷಸನಾಗುತ್ತಾನೆ.

ಮನಸ್ಸು ಚಂಚಲ. ಅದನ್ನು ಹಿಡಿದಿಟ್ಟುಕೊಳ್ಳುವ ಶಕ್ತಿ ಅದು ಮೌನ ತಪಸ್ಸಿಗಿದೆ. ಅದನ್ನು ಗುರುಸಿದ್ದ ಶ್ರೀಗಳು ಮೌನಾನುಷ್ಠಾನದ ಮೂಲಕ ಸಾಧಿಸಿದ್ದಾರೆ ಎಂದು ಇಳಕಲ್ಲ ಶ್ರೀ ಗುರುಮಹಾಂತ ಸ್ವಾಮಿಗಳು ಹೇಳಿದರು.



ಅವರು ಪಟ್ಟಣದ ಶ್ರೀ ಜಗದ್ಗುರು ಗುರುಸಿದ್ದೇಶ್ವರ ಬೃಹನ್ಮಠದಲ್ಲಿ ನೂತನ ಪೀಠಾಧಿಕಾರಿ ಶ್ರೀ ಜಗದ್ಗುರು ಗುರುಸಿದ್ದ ಪಟ್ಟದಾರ್ಯ ಮಹಾಸ್ವಾಮಿಗಳ ಪೀಠಾರೋಹಣ, 21ದಿನಗಳ ಲಿಂಗಪೂಜಾ ಮೌನಾನುಷ್ಠಾನ ಮಂಗಲ ಕಾರ್ಯಕ್ರಮದ ಸಾನಿಧ್ಯ ವಹಿಸಿ ಮಾತನಾಡಿ, ಮನಸ್ಸನ್ನು ನಾವು ಗೆಲ್ಲಬೇಕು. ಇಲ್ಲದಿದ್ದರೆ ಅದು ನಮ್ಮನ್ನು ಕೆಟ್ಟತನಕ್ಕೆ ದೂಕಿಬಿಡುತ್ತದೆ. ಮನಸ್ಸನ್ನು ಗೆದ್ದರೆ ನಾವೆಲ್ಲವನ್ನು ಗೆದ್ದಂತೆ. ಮನಸ್ಸು ಶಾಂತವಾಗುತ್ತದೆ. ಕಂಡಿದ್ದೆಲ್ಲವೂ ಶಿವಮಯವಾಗುತ್ತದೆ. ಇದನ್ನು ಹಿಡಿದಿಟ್ಟುಕೊಳ್ಳಲು ನಾವೆಲ್ಲ ಲಿಂಗಪೂಜೆ ಮಾಡಿಕೊಳ್ಳಬೇಕು ಎಂದರು.

ಶಿರೂರು ಮಹಾಂತ ತೀರ್ಥದ ಡಾ.ಬಸವಲಿಂಗ ಸ್ವಾಮಿಗಳು ಮಾತನಾಡಿ, ಎಲ್ಲ ಯೋಗಗಳ ಸಮನ್ವಯತೆಯೇ ಶಿವಯೋಗ. ಶಿವಯೋಗ ಒಳಗುಟ್ಟಿನಿಂದ ಕೂಡಿದೆ. ಅಂತರಂಗ, ಬಹಿರಂಗದ ಆತ್ಮಶುದ್ಧಿಗೆ ಇದು ನೆರವಾಗುತ್ತದೆ. ಆಧ್ಯಾತ್ಮ, ಆತ್ಮಬಲ ವೃದ್ಧಿಗೆ ಮೌನಯೋಗವೂ ಮನುಷ್ಯನನ್ನು ಬಹಳಷ್ಟು ಎತ್ತರಕ್ಕೆ ಕೊಂಡೊಯುತ್ತದೆ. ಪ್ರತಿಯೊಬ್ಬರಿಗೂ ಮೌನಯೋಗದ ಅನುಷ್ಠಾನ ದೊಡ್ಡ ಶಕ್ತಿ ತುಂಬುತ್ತದೆ ಎಂದರು.

ನೂತನ ಜಗದ್ಗುರು ಶ್ರೀ ಗುರುಸಿದ್ದ ಪಟ್ಟದಾರ್ಯ ಮಹಾಸ್ವಾಮಿಗಳು ಮೌನಾನುಷ್ಠಾನ ಮಂಗಲಗೊಳಿಸಿ ಮಾತನಾಡಿ, 21 ದಿನಗಳ ಕಾಲ ಮೌನವಾಗಿ ಉಳಿದು ಲಿಂಗಪೂಜೆಯಲ್ಲಿ ತೊಡಗಿದ್ದು ಆತ್ಮಬಲ, ಮನೋಬಲ ವೃದ್ಧಿಗೆ ಸಹಕಾರಿಯಾಗಿದೆ. ದೈಹಿಕವಾಗಿ ಮನುಷ್ಯ ಶ್ರಮಿಕನಾಗಬೇಕು. ದೇಹ ದಂಡಿಸಬೇಕು. ಮನಸ್ಸು ಹತೋಟಿಯಲ್ಲಿ ಇಡಬೇಕು. ಅದನ್ನು ಮೌನದಿಂದ ಸಾಧಿಸಲು ಸಾಧ್ಯ ಎಂದರು.

ಶ್ರೀಜಗದ್ಗುರು ಬಸವರಾಜ ಪಟ್ಟದಾರ್ಯ ಶ್ರೀಗಳು, ಶ್ರೀಅಭಿನವ ಒಪ್ಪತ್ತೇಶ್ವರ ಶ್ರೀಗಳು, ಬಸವ ಬೆಳಗು ಪತ್ರಿಕೆ ಸಂಪಾದಕ ಸಿದ್ದಣ್ಣ ಲಂಗೋಟಿ ಮಾತನಾಡಿದರು.

ಕಾರ್ಯಕ್ರಮದಲ್ಲಿ ಶಾಸಕ ಭೀಮಸೇನ ಚಿಮ್ಮನಕಟ್ಟಿ, ಮಾಜಿ ಶಾಸಕ ಮಲ್ಲಿಕಾರ್ಜುನ ಬನ್ನಿ, ಹೊಳಬಸು ಶೆಟ್ಟರ, ಸಂಜಯ ಬರಗುಂಡಿ, ಮಹಾಂತೇಶ ಸರಗಣಾಚಾರಿ, ಈರಣ್ಣ ಚಿಂದಿ, ನಾಗೇಶಪ್ಪ ಪಾಗಿ, ಸಂಗನಬಸಪ್ಪ ಚಿಂದಿ, ಪಟ್ಟಸಾಲಿ ನೇಕಾರ ಸಮಾಜ ಜಿಲ್ಲಾಧ್ಯಕ್ಷ ಶಿವಾನಂದ ನಾರಾ, ತಾಲೂಕು ಅಧ್ಯಕ್ಷ ಈರಣ್ಣ ಶೇಖಾ, ಮಹಿಳಾ ಘಟಕದ ಅಧ್ಯಕ್ಷೆ ಗೌರಮ್ಮ ಕಲಬುರ್ಗಿ, ರವೀಂದ್ರ ಗೌಡ್ರ, ಆನಂದತಿಪ್ಪಾ ಗೌಡ್ರ, ಚನ್ನಪ್ಪ ಚಿಂದಿ, ರಾಜು ಜವಳಿ, ದೊಡ್ಡಬಸು ಉಂಕಿ ಇತರರು ಇದ್ದರು.

# ಕೆಲವಡಿ ಪಿಕೆಪಿಎಸ್‌ಗೆ ಮುಗಳೊಳ್ಳಿ ಅಧ್ಯಕ್ಷ, ತಳವಾರ ಉಪಾಧ್ಯಕ್ಷ

**ಗುಳೇದಗುಡ್ಡ :** ಸಮೀಪದ ಕೆಲವಡಿ ಗ್ರಾಮದ ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘದ ಅಧ್ಯಕ್ಷರಾಗಿ ಮಂಜುನಾಥ ಮುಗಳೊಳ್ಳಿ, ಉಪಾಧ್ಯಕ್ಷರಾಗಿ ಕೆಲವಡಿಯ ರಂಗಪ್ಪ ತಳವಾರ ಅವಿರೋಧವಾಗಿ ಆಯ್ಕೆಯಾಗಿದ್ದಾರೆ ಎಂದು ಚುನಾವಣಾಧಿಕಾರಿ ಎಸ್.ಕೆ. ಬೆಳವಲದ ತಿಳಿಸಿದ್ದಾರೆ.



ಕೆಲವಡಿ ಗ್ರಾಮದ ಪಿಕೆಪಿಎಸ್ ಅಧ್ಯಕ್ಷ ಹಾಗೂ ಉಪಾಧ್ಯಕ್ಷ ಸ್ಥಾನಕ್ಕೆ ನಡೆದ ಚುನಾವಣೆಯಲ್ಲಿ ಅಧ್ಯಕ್ಷ ಸ್ಥಾನಕ್ಕೆ ತಿಮ್ಮಸಾಗರದ ಮಂಜುನಾಥ ಮುಗಳೊಳ್ಳಿ, ಮುತ್ತಪ್ಪ ಕಾಳನ್ನವರ ಇಬ್ಬರು ನಾಮಪತ್ರ ಸಲ್ಲಿಸಿದ್ದರು. ಬಳಿಕ ಮುತ್ತಪ್ಪ ಕಾಳನ್ನವರ ನಾಮಪತ್ರ ಹಿಂದಕ್ಕೆ ಪಡೆದರು. ಇನ್ನೂ ಉಪಾಧ್ಯಕ್ಷ ಸ್ಥಾನಕ್ಕೆ ಒಬ್ಬರೇ ನಾಮಪತ್ರ ಸಲ್ಲಿಸಿದ್ದರಿಂದ ಅಧ್ಯಕ್ಷ ಹಾಗೂ ಉಪಾಧ್ಯಕ್ಷ ಸ್ಥಾನ ಅವಿರೋಧವಾಗಿ ಆಯ್ಕೆಗೊಂಡಿದೆ. ಸಂಘದ 12 ಜನ ಸದಸ್ಯರಲ್ಲಿ ಮಹಿಬೂಬ ಮುಲ್ಲಾ ಗೈರಾಗಿದ್ದರೆ, ಉಳಿದ 11 ಜನ ಸದಸ್ಯರು ಚುನಾವಣೆಯಲ್ಲಿ ಹಾಜರಿದ್ದರು ಎಂದು ಚುನಾವಣಾಧಿಕಾರಿಗಳು ತಿಳಿಸಿದ್ದಾರೆ.

ಸಂಘದ ನಿರ್ದೇಶಕರಾದ ಬಸನಗೌಡ ಗೌಡರ, ಮಹಾದೇವಪ್ಪ ಛಬ್ಬಿ(ಮನ್ನಿಕೇರಿ), ಸೈಯದ ಖಾಜಿ, ಜಗನ್ನಾಥ ಬಡಿಗೇರ, ಮುತ್ತಪ್ಪ ಕಾಳನ್ನವರ, ತುಕಾರಾಮ ಬಂಡಿವಡ್ಡರ, ಕಮಲವ್ವ ಬಂದಕೇರಿ, ಹನಮವ್ವ ಬಾಳನ್ನವರ, ದಾನೇಶ್ವರಿ ಕೆರಕಲಮಟ್ಟಿ, ಸಹಾಯಕ ಚುನಾವಣಾಧಿಕಾರಿ ಎ.ಎಸ್.ಕಾಡರ, ಸಂಘದ ಕಾರ್ಯದರ್ಶಿ ಮುತ್ತುರಾಜ ವಾಲೀಕಾರ, ಹಾಗೂ ಮುಖಂಡರಾದ ನಾಗೇಶ ಮನಗೂಳಿ, ಶಂಕ್ರಪ್ಪ ಕೋಟಿ, ಮಲ್ಲಪ್ಪ ಶಿವಪುರ, ರಮೇಶ ಗೌಡರ, ರುದ್ರಗೌಡ ಪಾಟೀಲ, ಬಿ.ಆರ್. ಪಾಟೀಲ, ಕನಕಪ್ಪ ಬಂದಕೇರಿ, ಎಚ್.ಎನ್.ಛಬ್ಬಿ, ಸಿದ್ದಪ್ಪ ಮನಗೂಳಿ, ಸಂಗಪ್ಪ ಕೋಟಿ, ಮುತ್ತಪ್ಪ ಬಂದಕೇರಿ, ಕೆಲೂಡೆಪ್ಪ ಗೌಡರ, ಪುಂಡಲೀಕ ಕಂಬಳಿ, ಮುದನಕನಗೌಡ ಗೌಡರ ಇತರರು ಇದ್ದರು.

ವಿಜಯೋತ್ಸವ: ಕೆಲವಡಿ ಪಿಕೆಪಿಎಸ್‌ಗೆ ನೂತನ ಅಧ್ಯಕ್ಷ, ಉಪಾಧ್ಯಕ್ಷರ ಅವಿರೋಧ ಆಯ್ಕೆ ನಡೆಯುತ್ತಿದ್ದಂತೆ ಗ್ರಾಮದಲ್ಲಿ ಕಾರ್ಯಕರ್ತರು ಗುಲಾಲು ಎರಚಿ, ಪಟಾಕಿ ಸಿಡಿಸಿ ವಿಜಯೋತ್ಸವ ಆಚರಿಸಿ ಸಂಭ್ರಮಿಸಿದರು.

# ಕೊಪ್ಪಳ ಜಿಲ್ಲಾ ಪೌರ ನೌಕರರ ಸಂಘದ ಅಧ್ಯಕ್ಷರಾಗಿ ಶಿವಕುಮಾರ್ ಕಟ್ಟಿಮನಿ ನೇಮಕ


**ಕೊಪ್ಪಳ :** ಕೊಪ್ಪಳ ಜಿಲ್ಲಾ ಪೌರ ನೌಕರರ ಸಂಘದ ಅಧ್ಯಕ್ಷರಾಗಿ ಶಿವಕುಮಾರ್ ಕಟ್ಟಿಮನಿ ಅವರನ್ನು ರಾಜ್ಯ ಪೌರ ನೌಕರರ ಸಂಘದ ರಾಜ್ಯಾಧ್ಯಕ್ಷ ಕೆ. ಪ್ರಭಾಕರ್ ನೇಮಕ ಮಾಡಿ ಆದೇಶ ಹೊರಡಿಸಿದ್ದಾರೆ.



ಆದೇಶ ಪ್ರತಿಯಲ್ಲಿ ಬೈಲಾ ನಿಯಮಾವಳಿ ಪ್ರಕಾರ ನನಗೆ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಕೊಪ್ಪಳ ಜಿಲ್ಲೆಯ ರಾಜ್ಯ ಪೌರ ನೌಕರರ ಸಂಘದ ಶಿವಕುಮಾರ ಕಟ್ಟಿಮನಿ ನಿಮ್ಮನ್ನು ಕೊಪ್ಪಳ ಜಿಲ್ಲಾ ಸಂಘದ ಅಧ್ಯಕ್ಷನಾಗಿ ಮಾಡಲು ನಾನು ಹರಸುತ್ತೇನೆ. ತಾವುಗಳು ಈ ಹಿಂದೆ ಜಿ.ಎಸ್. ಮಂಜುನಾಥರವರ ನೇತೃತ್ವದ ಕರ್ನಾಟಕ ರಾಜ್ಯ ಪೌರ ನೌಕರರ ಸಂಘದ ಕೊಪ್ಪಳ ಜಿಲ್ಲಾಧ್ಯಕ್ಷನಾಗಿ ಉತ್ತಮವಾಗಿ ಸಂಘವನ್ನು ಸಂಘಟಿಸುವಲ್ಲಿ ಪ್ರಮುಖ ಪಾತ್ರವಹಿಸಿ ನೌಕರರ ಹಿತವನ್ನು ಕಾಪಾಡುವಲ್ಲಿ ಸಫಲರಾಗಿರುವುದರಿಂದ ನಿಮ್ಮ ಉತ್ತಮ ಸೇವೆಯನ್ನು ಪರಿಗಣಿಸಿ ನಿಮ್ಮನ್ನು ಕೊಪ್ಪಳ ಜಿಲ್ಲಾಧ್ಯಕ್ಷನಾಗಿ ನೇಮಿಸಿ ಆದೇಶ ಮಾಡಲಾಗಿದೆ. ಈ ಆದೇಶವು ಈ ಕ್ಷಣದಿಂದಲೇ ಜಾರಿಗೆ ಬರುವಂತೆ ಆದೇಶಿಸುತ್ತಾ ತಾವುಗಳು ಕೂಡಲೇ ಜಿಲ್ಲಾ ಸಂಘಟನೆಯ ಸಂಪೂರ್ಣ ಜವಾಬ್ದಾರಿ ತೆಗೆದು-ಕೊಂಡು ಕೊಪ್ಪಳ ಜಿಲ್ಲೆಯ ಎಲ್ಲಾ ನಗರ ಸ್ಥಳೀಯ ಸಂಸ್ಥೆಗಳಲ್ಲಿ ಕರ್ನಾಟಕ ರಾಜ್ಯ ಪೌರ ನೌಕರರ ಸಂಘವನ್ನು ಸ್ಥಾಪಿಸಿ ಸಂಘಟನೆಯನ್ನು ಬಲಪಡಿಸುತ್ತಾ ನೌಕರರ ಹಿತಕಾಯಲು ತಿಳಿಸಿದ್ದಾರೆ.

ಹರ್ಷ : ಕೊಪ್ಪಳ ಜಿಲ್ಲಾ ಪೌರ ನೌಕರರ ಸಂಘದ ಅಧ್ಯಕ್ಷರಾಗಿ ಶಿವಕುಮಾರ್ ಕಟ್ಟಿಮನಿ ಅವರನ್ನು ನೇಮಕಗೊಳಿಸಿದ್ದಕ್ಕೆ ಕೊಪ್ಪಳ ಜಿಲ್ಲಾ ಪೌರ ನೌಕರರು ಅಭಿನಂದಿಸಿ ಹರ್ಷ ವ್ಯಕ್ತಪಡಿಸಿದ್ದಾರೆ.

# ವಸ್ತು ಪ್ರದರ್ಶನ ಕಾರ್ಯಕ್ರಮಕ್ಕೆ ನಾಸೀರ ಹುಸೇನ್‌ರಿಂದ ಚಾಲನೆ



**ಕೊಪ್ಪಳ :** ನಗರದ ಮಿಲ್ಲತ್ ಪಬ್ಲಿಕ್ ಶಾಲೆಯಲ್ಲಿ ಬುಧವಾರ ದಂದು ವಿದ್ಯಾರ್ಥಿಗಳಿಂದ ಏರ್ಪಡಿಸಿದ ವಿಜ್ಞಾನ ಹಾಗೂ ಗಣಿತ ವಸ್ತು ಪ್ರದರ್ಶನದ ಕಾರ್ಯಕ್ರಮದ ಉದ್ಘಾಟನೆಯನ್ನು ಇಲ್ಲಿನ ಸಮಾಜಸೇವಕ ಲ್ಯಾಂಡ್ ಡೆವಲೊ ಪರ್ ಸೈಯದ್ ನಾಸೀರ್ ಹುಸೇನ್ ರವರು ನೆರವೇರಿಸಿ ಚಾಲನೆ ನೀಡಿದರು,

ಕಾರ್ಯಕ್ರಮದಲ್ಲಿ ಕೊಪ್ಪಳ ಇನ್ನರ್ ವೀಲ್ ಕ್ಲಬ್ ಅಧ್ಯಕ್ಷರಾದ ಉಮಾ ತಂಬ್ರಳ್ಳಿ ಕಾರ್ಯದರ್ಶಿ ಮೀನಾಕ್ಷಿ ಬಣ್ಣದ ಬಾವಿ ಎಡಿಟರ ನಾಗವೇಣಿ ಗುರ ಹಿರಿಯ ವೈದ್ಯರಾದ ಡಾ. ರಾಧಾ ಕುಲಕರ್ಣಿ, ಸಂಸ್ಥೆಯ ಮುಖ್ಯ ಸಲಹೆಗಾರ ಎಂ ಸಾಧಿಕ್ ಅಲಿ ಪಾಲಕರ ಪ್ರತಿನಿಧಿ ಪತೇ ಸಾಬ್ ಚುಟ್ಟಿ ಮಿಲ್ಲತ್ ಶಿಕ್ಷಣ ಮತ್ತು ಕಲ್ಯಾಣ ಸಂಸ್ಥೆಯ ಪದಾಧಿಕಾರಿಗಳಾದ ಅಬ್ದುಲ್ ಅಜೀಜ್ ಮಾನ್ವಿಕರ್, ಸೈಯದ್ ಇಮಾಮ್ ಹುಸೇನ್ ಸಿಂದಗಿ ಎಂಡಿ ಜಹೀರ್ ಅಲಿ, ದಾವುದ್ ಹುನಗುಂದ್, ಮುಖ್ಯ ಶಿಕ್ಷಕ ಮೊಹಮ್ಮದ್ ಅಜೀಜ್ ರೆವಡಿ ಸೇರಿದಂತೆ ಅನೇಕರು ಪಾಲ್ಗೊಂಡಿದ್ದರು.

"SIHI KAHI" Kannada Daily Morning, Editor, Owner, Publisher, Printer by **MARUTI BASAVANTAPPA HOASAMANI** Published from Chittaragi Cross, S.C. Colony, Ward No. 9, Amingada-587112, Tq. Hungund Dist : Bagalkot, Karnataka and Printed at **SUDIN PRINTERS**, Sector No. 33, Shop No. 38 & 40, Opp. Ambedkar Bhavan, **NAVANAGAR, BAGALKOT-587 101.** Dist : Bagalkot, Karnataka State